ಉ. ಕಾ. ಸುಬ್ಬರಾಯಾಚಾರ್

ವಾಲ್ಮೀಕಿ ರಾಮಾಯಣ

ಪ್ರಚಾರ ಪುಸ್ತಕಮಾಲೆ-[illegible]೮-2

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

೧೯೭೧

ಪ್ರಚಾರ ಪುಸ್ತಕಮಾಲೆ-೮೬

ವಾಲ್ಮೀಕಿ ರಾಮಾಯಣ

ಉ. ಕಾ. ಸುಬ್ಬರಾಯಾಚಾರ್, ಎಂ. ಎ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೬೧

ಮೊದಲನೆಯ ಮುದ್ರಣ ೧೯೫೯
ಎರಡನೆಯ ಮುದ್ರಣ ೧೯೬೧
೫೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಮುದ್ರಕರು
ಮಂಗಳೂರು ಪ್ರಿಂಟರ್ಸ್
ಶ್ರೀರಾಮಪೇಟೆ, ಮೈಸೂರು-೧

ಮುನ್ನುಡಿ

ಈ ಪ್ರಚಾರ ಪುಸ್ತಕಮಾಲೆ ಪ್ರಾರಂಭವಾಗಿ ಇಂದಿಗೆ ಸುಮಾರು ಇಪ್ಪತ್ತೈದು ವರ್ಷಗಳಾಗಿವೆ. ಈ ಅವಧಿಯಲ್ಲಿ ಲಕ್ಷ ಪುಸ್ತಿಕೆಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ. ಕಾಲಾವಧಿಯನ್ನು ಗಮನಿಸಿದರೆ ಈಗ ಹೊರಬಿದ್ದಿರುವ ಕಿರುಹೊತ್ತಗೆಗಳ ಸಂಖ್ಯೆ ಈಗಿರುವುದಕ್ಕಿಂತಲೂ ದ್ವಿಗುಣವೊ ತ್ರಿಗುಣವೊ ಆಗಿರಬೇಕಾಗಿತ್ತೆಂದು ಹೇಳಬಹುದು. ಆದರೂ ಅವುಗಳ ಗುಣವನ್ನೂ ಅವು ಮಾರಾಟವಾಗುತ್ತಿರುವ ವೇಗವನ್ನೂ ಗಮನಿಸಿದರೆ ಈ ಮಾಲೆಯ ಉಪಯುಕ್ತತೆ ಮತ್ತು ಜನಪ್ರಿಯತೆ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಪುಸ್ತಿಕೆಯೂ ಮೂರು ನಾಲ್ಕು ಸಾರಿ ಮುದ್ರಿತವಾಗಿದೆ. ದಿನೇ ದಿನೇ ಈ ಮಾಲೆಯ ಬಗೆಗೆ ಜನರ ವಿಶ್ವಾಸಾದರಗಳು ಅಧಿಕವಾಗುತ್ತಿವೆ. "ಈ ತಿಂಗಳು ಏನಾದರೂ ಹೊಸ ಪುಸ್ತಿಕೆ ಬಂದಿದೆಯೆ ? ಮುಗಿದು ಹೋಗಿರುವ ಪುಸ್ತಿಕೆಗಳು ಅಚ್ಚಾಗಿವೆಯೆ ?" ಎಂದು ಮೇಲಿಂದ ಮೇಲೆ ಜನ ಕೇಳುತ್ತಿರುತ್ತಾರೆ. ಇದು ನಿಜವಾಗಿಯೂ ಸಂತೋಷದ ಸಂಗತಿ ; ನಾಡಿನ ಪ್ರಗತಿಯ ಒಂದು ಚಿಹ್ನೆ.

ನಾಡಿನಲ್ಲಿ ದಿನೇ ದಿನೇ ವಿದ್ಯಾವಂತರ ಮತ್ತು ಅಕ್ಷರಸ್ಥರ ಸಂಖ್ಯೆ ಬೆಳೆಯುತ್ತಿದೆ. ಕೇವಲ ಸಾಕ್ಷರತೆಯಿಂದ ಮಹತ್ತ್ವಾದ ಪ್ರಯೋಜನವೇನೂ ಲಭಿಸದು. ಸಾಕ್ಷರತೆ ಬೇರೊಂದು ಸಿದ್ಧಿಗಾಗಿ ಸಾಧನವೇ ಹೊರತು ಅದೇ ಪರಮಗುರಿಯಲ್ಲ ; ಜ್ಞಾನಸಂಪಾದನೆಯೇ ಅದರ ಪರಮ ಗುರಿ. ಈ ಗುರಿಯ ಸಾಧನೆಗಾಗಿ ಸಕಲ ಅನುಕೂಲತೆಗಳನ್ನು ಕಲ್ಪಿಸುವುದು ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಆದ್ಯಕರ್ತವ್ಯ. ಈ ಮೂಲಕ ವಿಶ್ವ

ವಿದ್ಯಾನಿಲಯದ ಜ್ಞಾನವಾಹಿನಿ ನಾಡಿನ ಮೂಲೆಮೂಲೆಗೆಲ್ಲ ಹರಿದು, ಸಮಷ್ಟಿಪ್ರಜ್ಞೆ ವಿಕಾಸಗೊಳ್ಳಲನುಕೂಲವಾಗುತ್ತದೆ.

ಈ ಮಾಲೆಯಿಂದ ಸಾಮಾನ್ಯ ಜನರಲ್ಲಿ ಜ್ಞಾನಪ್ರಸಾರ ಕಾರ್ಯ ತಕ್ಕಮಟ್ಟಿಗೆ ಯಶಸ್ವಿಯಾಗಿ ನಡೆದಿರುವಂತೆಯೆ ಕನ್ನಡ ದಲ್ಲಿ ವಿಜ್ಞಾನಸಂಬಂಧವಾದ ವಿಷಯಗಳನ್ನು ಸುಲಭವಾಗಿ ಸರಳವಾಗಿ ಹೇಳಬಹುದು, ಮತ್ತು ಕನ್ನಡ ವೈಜ್ಞಾನಿಕ ಭಾಷೆ ಯಾಗಬಲ್ಲದು ಎಂಬ ಅಂಶ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಪುಸ್ತಿಕೆಗಳ ಪಟ್ಟಿಯನ್ನೊಮ್ಮೆ ಓದಿದರೆ ಸಂದೇಹವಾದಿಗಳ ಶಂಕೆ ಸಂಪೂರ್ಣವಾಗಿ ನಿವಾರಣೆಗೊಂಡು ಧೈರ್ಯ ಮೂಡದಿರದು. ಇವುಗಳಲ್ಲಿ ೫೫ ಪುಸ್ತಿಕೆಗಳು ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ಸಮಾಜ ವಿಜ್ಞಾನ, ವೈದ್ಯ ವಿಜ್ಞಾನ, ಗಣಿತ ವಿಜ್ಞಾನ, ಇತಿಹಾಸ ಮೊದಲಾದುವುಗಳಿಗೆ ಸಂಬಂಧಿಸಿದವು. ಉಳಿದ ೨೪ ಪುಸ್ತಿಕೆಗಳು ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದುವು. ಇವುಗಳ ಗ್ರಂಥಕರ್ತರು ಪ್ರಮುಖವಾಗಿ ವಿಶ್ವವಿದ್ಯಾನಿಲಯದಲ್ಲಿ ಹತ್ತಿಪ್ಪತ್ತು ವರ್ಷಗಳ ಕಾಲ ಪಾಠ ಹೇಳಿ ನುರಿತಿರುವ ಘನ ವಿದ್ವಾಂಸರು. ಬಹಳ ಹಿಂದೆಯೇ ವೈಜ್ಞಾನಿಕ ಗ್ರಂಥಗಳ ರಚನೆಗೆ ಕೈಹಾಕಿ ಕನ್ನಡ ವೈಜ್ಞಾನಿಕ ಭಾಷೆಯಾಗುವ ಸಾಮರ್ಥ್ಯವನ್ನು ಪಡೆದಿದೆ, ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಮಾಧ್ಯಮವಾಗುವ ಶಕ್ತಿ ಯನ್ನು ಪಡೆದಿದೆ ಎಂದು ತೋರಿಸಿಕೊಟ್ಟಿದ್ದಾರೆ. ಅವರೆಲ್ಲ ಅಭಿನಂದನಾರ್ಹರು.

ಈ ಮಾಲೆಯ ಕಾರ್ಯ ತ್ವರಿತಗೊಂಡು, ವಿಸ್ತಾರಗೊಂಡು ಪುಸ್ತಕಗಳ ಸಂಖ್ಯೆ ದಿನೇ ದಿನೇ ಬೆಳೆಯಬೇಕೆಂದೂ, ಇದರಿಂದ ಸಾಮಾನ್ಯ ಜನತೆ ಸಂಪೂರ್ಣ ಪ್ರಯೋಜನ ಪಡೆದು ಸಮಷ್ಟಿ

ಪ್ರಜ್ಞೆ ಸರ್ವತೋಮುಖವಾಗಿ ವಿಕಾಸಗೊಳ್ಳಬೇಕೆಂಬುದೂ ವಿಶ್ವವಿದ್ಯಾನಿಲಯದ ಆಸೆ. ಕನ್ನಡನಾಡು ಒಂದುಗೂಡಿರುವ ಈ ಶುಭಮುಹೂರ್ತದಲ್ಲಿ ಕನ್ನಡನುಡಿ ಆಡಳಿತದ ಭಾಷೆಯಾಗಿ, ವ್ಯವಹಾರದ ಭಾಷೆಯಾಗಿ, ಶಿಕ್ಷಣದ ಭಾಷೆಯಾಗಿ, ಜನತೆಯ ಸಂಸ್ಕೃತಿ ವಿಕಾಸಸಾಧನದ ಭಾಷೆಯಾಗಿ ಮುಂದುವರಿಯುವುದರಲ್ಲಿ ಸಂದೇಹವಿಲ್ಲ. ವಿಶ್ವವಿದ್ಯಾನಿಲಯದ ಈ ಸೇವೆಯನ್ನು ಕರ್ನಾಟಕ ಸಂಪೂರ್ಣವಾಗಿ ತನ್ನ ಮೇಲ್ಮೆಗೂ ಏಳ್ಗೆಗೂ ಬಳಸಿಕೊಳ್ಳುತ್ತದೆಂದು ನಾವು ಹಾರೈಸುತ್ತೇವೆ.

ಮೈಸೂರು
೫–೧–೫೯

ಕೆ. ವಿ. ಪುಟ್ಟಪ್ಪ
ವೈಸ್-ಛಾನ್ಸಲರ್.

ಅರಿಕೆ

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯ ಆಶ್ರಯದಲ್ಲಿ ಪುತ್ತೂರಿನಲ್ಲಿ ಮಾಡಿದ ಭಾಷಣವೆ ಈ ಪುಸ್ತಕ ರೂಪದಲ್ಲಿ ಬಂದಿದೆ. ಪೂಜ್ಯ ವಿದ್ಯಾ ಗುರುಗಳಾದ ಪ್ರೊ|| ತೀ. ನಂ. ಶ್ರೀಕಂಠಯ್ಯನವರು ಈ ಪುಸ್ತಕದ ಹಸ್ತಪ್ರತಿ ಯನ್ನು ಓದಿ ದಯೆಯಿಟ್ಟು ತಿದ್ದಿ ಕೊಟ್ಟಿದ್ದಾರೆ. ಮಾತೃ ಸದೃಶ ರಾದ ಪೂಜ್ಯ ಪಂಡಿತಾ ಸುಂದರಮ್ಮನವರು ಸಂಸ್ಕೃತ ವಾಲ್ಮೀಕಿ ರಾಮಾಯಣದ ರಸಕೋಶಕ್ಕೆ ಪ್ರವೇಶಿಸಲು ಸಹಾಯ ಮಾಡಿದ್ದಾರೆ. ಪ್ರಕಟಣಶಾಖೆಯ ಕಾರ್ಯದರ್ಶಿಯವರಾದ ಶ್ರೀಮಾನ್ ತ. ಸು. ಶಾಮರಾವ್ ಅವರು ಈ ಪುಸ್ತಕ ಬರೆಯಲು ತುಂಬ ಪ್ರೋತ್ಸಾಹವಿತ್ತಿದ್ದಾರೆ. ಇವರೆಲ್ಲರಿಗೂ ಕೃತಜ್ಞನಾಗಿದ್ದೇನೆ.

ಈ ಪುಸ್ತಕದಲ್ಲಿ ಧರ್ಮದೃಷ್ಟಿಯೆ ಪ್ರಧಾನವಾಗಿದೆ. ಸಾಹಿತ್ಯ ದೃಷ್ಟಿಯಿಂದ ರಸವತ್ತಾದ ಭಾಗಗಳನ್ನು ಹೆಚ್ಚಾಗಿ ನಿರೂಪಿಸಲು ಇಲ್ಲಿ ಸಾಧ್ಯವಾಗಲಿಲ್ಲ. ವಾಲ್ಮೀಕಿ ರಾಮಾಯಣವನ್ನು ಕುರಿತು ಸಮರ್ಪಕವಾದ ವಿಮರ್ಶಾಕೃತಿಯನ್ನು ವಿಸ್ತಾರವಾಗಿ ಬರೆಯುವ ಅಭೀಪ್ಸೆ ಇದೆ. ಭಗವತ್ ಕೃಪೆಯಿಂದ ಆ ಕಾರ್ಯ ಸಾಧ್ಯವಾದೀತು !

ಉ. ಕಾ. ಸುಬ್ಬರಾಯಾಚಾರ್

ವಿಷಯ ಸೂಚಿ

ವಾಲ್ಮೀಕಿ ರಾಮಾಯಣ

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಂ |
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ ||

"ಕಾವ್ಯಶ್ರೀಯ ಕೊಂಬೆಯನ್ನೇರಿ 'ರಾಮ, ರಾಮ' ಎಂಬ ಮಧುರಾಕ್ಷರಗಳನ್ನು ಮಧುರವಾಗಿ ಧ್ವನಿಗೈಯುವ ವಾಲ್ಮೀಕಿ ಕೋಗಿಲೆಯನ್ನು ವಂದಿಸುತ್ತೇನೆ."

ಕವಿ ಕಾವ್ಯ ವಿಚಾರ

ಶ್ರೀಮದ್ವಾಲ್ಮೀಕಿ ರಾಮಾಯಣವು ಭಾರತೀಯರ ಅಮೂಲ್ಯ ಸಾಂಸ್ಕೃತಿಕ ಪ್ರತಿನಿಧಿಯಾಗಿ ಅಪೂರ್ವ ಶೋಭೆಯಿಂದ ಬೆಳಗುತ್ತಿರುವ ಮಹಾಕಾವ್ಯ. ಇಂತಹ ಮಹಾಕೃತಿಯನ್ನು ಸೃಜಿಸಿದ ಮಹರ್ಷಿ ವಾಲ್ಮೀಕಿಯ ವಿಚಾರವಾಗಿ ನಮಗೆ ಹೆಚ್ಚು ಸಂಗತಿಗಳು ತಿಳಿದಿಲ್ಲ. ರಾಮಾಯಣದಲ್ಲಿ ತನ್ನ ಆತ್ಮ ಕಥೆಯನ್ನು ವಾಲ್ಮೀಕಿ ಎಲ್ಲಿಯೂ ಹೇಳಿಲ್ಲ. ಬಾಲಕಾಂಡದ ಬಹು ಭಾಗವೂ ಉತ್ತರ ಕಾಂಡವೂ ಪ್ರಕ್ಷಿಪ್ತವೆಂದು ವಿದ್ವಾಂಸರು ಅಭಿಪ್ರಾಯ ಪಡುವುದರಿಂದ ಅವುಗಳನ್ನು ಆಧಾರವಾಗಿಟ್ಟುಕೊಳ್ಳುವಂತಿಲ್ಲ. ಆದರೆ ವಿಚಾರ ದೃಷ್ಟಿಯಿಂದ ಅಲ್ಲಿ ಬರುವ ಕವಿಯ ವಿಚಾರವನ್ನು ಗಮನಿಸುವುದು ಉತ್ತಮ. ಬಾಲಕಾಂಡದ ಪ್ರಾರಂಭದಲ್ಲಿ ವಾಲ್ಮೀಕಿ ಮಹರ್ಷಿ, ನಾರದ ಮಹರ್ಷಿಯನ್ನು ಕುರಿತು ಈ ಲೋಕದಲ್ಲಿ ಗುಣವಂತ, ವೀರ್ಯವಂತ, ಆತ್ಮವಂತ, ಧರ್ಮಜ್ಞ, ಕೃತಜ್ಞ, ಸತ್ಯವಾಕ್, ಸಮರ್ಥ, ಜಿತಕ್ರೋಧ [illegible]—ಮೊದಲಾದ ಆದರ್ಶ ಗುಣಗಳಿಂದ ಕೂಡಿದವನು

ಯಾರಿರುವರು ? ಎಂದು ಪ್ರಶ್ನಿಸಲು, ನಾರದ ಮಹರ್ಷಿ ಇಕ್ಷ್ವಾಕುವಂಶ ಪ್ರಭವನಾದ ರಾಮನ ಕಥೆಯನ್ನು ಹೇಳಿದ ನೆಂಬ ಉಲ್ಲೇಖವಿದೆ. ಅನಂತರ ವಾಲ್ಮೀಕಿ ತನ್ನ ಶಿಷ್ಯ ಭರದ್ವಾಜನೊಡನೆ ಸ್ನಾನಕ್ಕಾಗಿ ತಮಸಾ ನದಿಗೆ ತೆರಳಿದನು. ಆ ಸಮಯದಲ್ಲಿ ಸುಮಧುರ ಧ್ವನಿಗೈಯುತ್ತ ಆಕಾಶದಲ್ಲಿ ವಿಹರಿಸುತ್ತಿದ್ದ ಕ್ರೌಂಚ ಮಿಥುನಗಳು ಮಹರ್ಷಿಗೆ ಕಾಣಿ ಸಿದುವು. ಆ ಸಂದರ್ಭದಲ್ಲಿ ಬೇಡನೊಬ್ಬನು ಆ ದಂಪತಿಗಳಲ್ಲಿ ಗಂಡು ಹಕ್ಕಿಯನ್ನು ಬಾಣದಿಂದ ಹೊಡೆದು ಕೆಳಕ್ಕೆ ಉರುಳಿಸಿ ದನು. ರಕ್ತವನ್ನು ಕಾರುತ್ತ ಬಿದ್ದಿದ್ದ ಗಂಡು ಹಕ್ಕಿಯನು ಕಂಡು, ಹೆಣ್ಣು ಹಕ್ಕಿ ಹೃದಯ ವಿದ್ರಾವಕವಾಗಿ ಕೂಗಿ ಕೊಂಡಿತು. ಅದನ್ನು ಕಂಡು ಸಮಸ್ತ ಪ್ರಕೃತಿಯೂ ದುಃಖ ಪೂರ್ಣವಾಯಿತು. ವಾಲ್ಮೀಕಿಗೆ ಶೋಕಾತಿರೇಕದಿಂದ ಬೇಡನ ಮೇಲೆ ಕೋಪವುಂಟಾಗಿ ಅವನನ್ನು ಶಪಿಸಿದನು.

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಮ್ ।

"ಬೇಡನೆ, ಯಾವ ಕಾರಣದಿಂದ ಕಾಮಮೋಹಿತವಾದ ಕ್ರೌಂಚ ದಂಪತಿಗಳಲ್ಲಿ ಒಂದು ಪಕ್ಷಿಯನ್ನು ಕೊಂದೆಯೊ ಅದಕ್ಕಾಗಿ ನೀನು ಬಹುಕಾಲ ಬದುಕಬೇಡ."

ಇಂತು ಶಪಿಸಿದ ಮಹರ್ಷಿಯ ಮನಸ್ಸು ವ್ಯಾಕುಲವಾಯಿತು. ಸ್ನಾನ ಮುಗಿಸಿ ಅಂದಿನ ಘಟನೆಯನ್ನು ಯೋಚಿಸುತ್ತ ಆಶ್ರಮಕ್ಕೆ ಹಿಂದಿರುಗಿ ಧ್ಯಾನಸ್ಥಿತನಾದಾಗ ಬ್ರಹ್ಮನು ಬಂದು ವಾಲ್ಮೀಕಿಯನ್ನು ಸಂತೈಸಿ ನಾರದರಿಂದ ಕೇಳಿದ ರಾಮ ಕಥೆ

ಯನ್ನು ರಚಿಸುವಂತೆ ಪ್ರೇರಿಸಿ, ರಾಮಾಯಣವು ಅಮರವಾಗು ವುದೆಂಬ ಅಭಯವನ್ನಿತ್ತನು.

ಯಾವತ್ ಸ್ಥಾಸ್ಯನ್ತಿ ಗಿರಯಃ ಸರಿತಶ್ಚ ಮಹೀತಲೇ।
ತಾವದ್ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ॥

"ಎಲ್ಲಿಯವರೆಗೆ ಭೂಮಿಯಲ್ಲಿ ಗಿರಿಗಳೂ ನದಿಗಳೂ ಇರು ವವೋ ಅಲ್ಲಿಯವರೆಗೆ ರಾಮಾಯಣ ಕಥೆಯು ಲೋಕದಲ್ಲಿ ಪ್ರಚಾರವಾಗುತ್ತದೆ."

ಬ್ರಹ್ಮನಿಂದ ಸ್ಫೂರ್ತಿ ಪಡೆದ ವಾಲ್ಮೀಕಿಗೆ ಧ್ಯಾನದಲ್ಲಿ ರಾಮಾಯಣವು ಕರತಲಾಮಲಕವಾಗಿ ಸುಸ್ಪಷ್ಟವಾಗಿ ಗೋಚ ರಿಸಿ, ರಾಮಾಯಣ ಮಹಾಕಾವ್ಯವು ಸೃಷ್ಟಿಯಾಯಿತು.

ಈ ನಿರೂಪಣೆಯನ್ನು ವಾಲ್ಮೀಕಿಯೇ ರಚಿಸಿದನೆಂದು ಹೇಳು ವುದಕ್ಕಾಗುವುದಿಲ್ಲ. ವಾಲ್ಮೀಕಿಯ ಶಿಷ್ಯನಾದ ಭರದ್ವಾಜನೊ ಅಥವಾ ಅವನಿಂದ ವಾಲ್ಮೀಕಿಯ ವಿಚಾರವನ್ನು ಕೇಳಿದವನು ಬೇರೆ ಯಾರೊ ರಚಿಸಿರಬಹುದು. ಈ ಮೊದಲ ಭಾಗವನ್ನು ಯಾರು ರಚಿಸಿದರೆಂದು ಹೇಳಿ ಸ್ಪಷ್ಟ ಪಡಿಸಲು ಆಧಾರಗಳಿಲ್ಲ. ನಾರದನ ಆಗಮನ, ಬ್ರಹ್ಮನು ಬಂದುದು ಇತ್ಯಾದಿ ವಿಚಾರ ಗಳನ್ನು ಚಾರಿತ್ರಿಕ ದೃಷ್ಟಿಯಿಂದ ಒಪ್ಪಿಕೊಳ್ಳುವುದು ಕಷ್ಟ. ವಾಲ್ಮೀಕಿ ಮಹರ್ಷಿಯಲ್ಲಿ ಪೂಜ್ಯ ಭಾವವಿರುವವನು ಯಾರೊ ಭರದ್ವಾಜನಿಂದ ಕೇಳಿದ ವಾಲ್ಮೀಕಿಯ ವೃತ್ತಾಂತವನ್ನು ಆಲಂಕಾರಿಕವಾಗಿ ನಿರೂಪಿಸಿರುವಂತೆ ಕಾಣುತ್ತದೆ.

ರಾಮಾಯಣದ ಅಯೋಧ್ಯಾ ಕಾಂಡದಲ್ಲಿ ಸೀತಾರಾಮ ಲಕ್ಷ್ಮಣರು ಚಿತ್ರಕೂಟವನ್ನು ಸೇರಿದಾಗ ವಾಲ್ಮೀಕಿ ಮಹ ರ್ಷಿಯ ಆಶ್ರಮಕ್ಕೆ ಹೋದ ಉಲ್ಲೇಖವಿದೆ.

ಇತಿ ಸೀತಾಚ ರಾಮಶ್ಚ ಲಕ್ಷ್ಮಣಶ್ಚ ಕೃತಾಂಜಲಿಃ |
ಅಭಿಗಮ್ಯಾಶ್ರಮಂ ಸರ್ವೇ ವಾಲ್ಮೀಕಿಮಭಿವಾದಯನ್ ||
ತಾನ್ಮಹರ್ಷಿಃ ಪ್ರಮುದಿತಃ ಪೂಜಯಾಮಾಸ ಧರ್ಮವಿತ್ |
ಆಸ್ಯತಾಮಿತಿ ಚೋವಾಚ ಸ್ವಾಗತಂತು ನಿವೇದ್ಯ ಚ ||

"ಸೀತಾರಾಮ ಲಕ್ಷ್ಮಣರು ಅಂಜಲಿ ಬದ್ಧರಾಗಿ ವಾಲ್ಮೀಕಿ ಆಶ್ರಮವನ್ನು ಪ್ರವೇಶಿಸಿ ವಾಲ್ಮೀಕಿಯನ್ನು ನಮಸ್ಕರಿಸಿದರು. ಧರ್ಮವೇತ್ತನಾದ ಮಹರ್ಷಿ ವಾಲ್ಮೀಕಿ, ಅವರನ್ನು ಸ್ವಾಗತಿಸಿ ಆದರಿಸಿ ಪೂಜಿಸಿದನು."

ಉತ್ತರಕಾಂಡದಲ್ಲಿ ಸೀತೆ ವಾಲ್ಮೀಕಿಯ ಆಶ್ರಮದಲ್ಲಿ ಆಶ್ರಯ ಪಡೆದು ಲವಕುಶರಿಗೆ ಜನ್ಮವಿತ್ತು ಆ ಮಕ್ಕಳನ್ನು ಬೆಳೆಸಿದ ಉಲ್ಲೇಖವಿದೆ. ಈ ಉಲ್ಲೇಖಗಳಿಂದ ವಾಲ್ಮೀಕಿ ರಾಮನ ಸಮಕಾಲೀನನೆಂದು ಹೇಳಿದಂತಾಯಿತು. ಆದರೆ ವಾಲ್ಮೀಕಿ ರಾಮನ ಸಮಕಾಲೀನನಾಗಿದ್ದರೆ ನಾರದ ಮಹರ್ಷಿಯಿಂದ ರಾಮ ಕಥೆಯನ್ನು ಕೇಳುವ ಆವಶ್ಯಕತೆ ಇರಲಿಲ್ಲ. ಈ ಮೂರು ಕಡೆಯಲ್ಲಿ ಬರುವ ಭಾಗಗಳು ಪ್ರಕ್ಷಿಪ್ತವೆಂದು ವಿದ್ವಾಂಸರು ಅಭಿಪ್ರಾಯ ಪಡುವುದರಿಂದ, ವಾಲ್ಮೀಕಿ ರಾಮನ ಸಮಕಾಲೀನನೆಂದು ಹೇಳುವಂತಿಲ್ಲ. ರಾಮನಂತಹ ಮಹಾ ಪುರುಷನು ಬದುಕಿ ಬಾಳಿ ಅನೇಕ ವರ್ಷಗಳಾದ ಮೇಲೆ ವಾಲ್ಮೀಕಿ ಮಹರ್ಷಿ ಮಹಾಕಾವ್ಯವನ್ನು ರಚಿಸಿರಬೇಕು. ಚಾರಿತ್ರಿಕ ಮಹಾಪುರುಷನು ಗತಿಸಿದ ಬಳಿಕ ಅವನನ್ನು ಕುರಿತು ಅನೇಕ ಗೀತಗಳೂ ಲಾವಣಿಗಳೂ ರಚಿತವಾಗಿ ಜನಪ್ರಿಯವಾದ ಬಳಿಕ ಮಹಾಕವಿಯೊಬ್ಬನ ಪ್ರತಿಭೆಯಲ್ಲಿ ಪೋಷಿತವಾಗಿ ಸೃಷ್ಟಿಯಾಗುತ್ತದೆ ಮಹಾಕಾವ್ಯ. ಸಮಕಾಲೀನವಾದ ವಿಚಾರವನ್ನು ಕುರಿತು ಉತ್ತಮ ಕಾವ್ಯವನ್ನು ಬರೆಯುವುದು ಕಷ್ಟ. ಈ

ಕಾರಣದಿಂದ ವಾಲ್ಮೀಕಿ ಬಹುಮಟ್ಟಿಗೆ ರಾಮನ ಸಮಕಾಲೀನನಾಗಿರುವುದು ಅಸಂಭವ.

ಅಧ್ಯಾತ್ಮ ರಾಮಾಯಣದಲ್ಲಿ ವಾಲ್ಮೀಕಿ ಪೂರ್ವದಲ್ಲಿ ದ್ವಿಜನಾಗಿದ್ದು ಆಚಾರದಲ್ಲಿ ಶೂದ್ರನಾಗಿ ಕಿರಾತನೊಡನೆ ಬೆಳೆದವನೆಂಬ ಉಲ್ಲೇಖವಿದೆ.

ಅಹಂ ಪುರಾ ಕಿರಾತೇಷು ಕಿರಾತೈಸ್ಸಹವರ್ಧಿತಃ ।
ಜನ್ಮ ಮಾತ್ರಾದ್ವಿಜತ್ವಂ ಮೇ ಶೂದ್ರಾಚಾರರತಸ್ಸದಾ ॥

ಅಧ್ಯಾತ್ಮ ರಾಮಾಯಣ ರಚಿತವಾದ ಕಾಲ ಸುಮಾರು ಹದಿಮೂರನೆಯ ಶತಮಾನ. ಆದ್ದರಿಂದ ಈ ಉಲ್ಲೇಖವನ್ನು ಪ್ರಮಾಣವಾಗಿ ಸ್ವೀಕರಿಸುವಂತಿಲ್ಲ.

ಕೃತ್ತಿವಾಸ ರಾಮಾಯಣದಲ್ಲಿ ವಾಲ್ಮೀಕಿ ಚ್ಯವನ ಮುನಿಯ ಪುತ್ರನೆಂದೂ ಅವನ ಹೆಸರು ರತ್ನಾಕರನೆಂದೂ ದಸ್ಯುವೃತ್ತಿಯಿಂದ ಬೆಳೆದನೆಂದೂ ಹೇಳಿದೆ.

ಚ್ಯವನ್ ಮುನಿರ್ ಪುತ್ರ ನಾಮ್ ರತ್ನಾಕರ್ ।
ದಸ್ಯುವೃತ್ತಿ ಕರೇ ಸೇಯಿ ವನೇರ್ ಬಿತರ್ ॥

ಕೃತ್ತಿವಾಸನು ಸುಮಾರು ಹದಿನಾಲ್ಕನೆಯ ಶತಮಾನದ ಆದಿಯಲ್ಲಿ ರಾಮಾಯಣವನ್ನು ರಚಿಸಿದುದರಿಂದ ಈ ಉಲ್ಲೇಖವನ್ನು ಪ್ರಮಾಣವಾಗಿಟ್ಟುಕೊಳ್ಳುವುದು ಸಾಧ್ಯವಿಲ್ಲ. ವಾಲ್ಮೀಕಿ ಬೇಡನಾಗಿದ್ದನೆಂಬುದು ಜನಜನಿತವಾಗಿರುವ ಸಂಗತಿ. ಇದೇ ಸತ್ಯಕ್ಕೆ ಅತಿ ಸಮೀಪವಾಗಿರಬಹುದು. ವ್ಯಾಧನಾಗಿದ್ದ ವಾಲ್ಮೀಕಿ, ಭಗವತ್ ಕೃಪೆಯಿಂದ ಭಾರತದ ಆದಿಕವಿಯಾಗಿ ಪೂಜ್ಯನಾಗಿದ್ದಾನೆ.

ವಾಲ್ಮೀಕಿ ರಚಿಸಿದ ರಾಮಾಯಣವು ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ, ಯುದ್ಧಕಾಂಡಗಳೆಂಬ ಆರುಕಾಂಡಗಳ ನ್ನುಳ್ಳದ್ದು. ಉತ್ತರ ಕಾಂಡವು ಪ್ರಕ್ಷಿಪ್ತವೆಂದು ಬಹುಜನ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಶೈಲಿಯ ದೃಷ್ಟಿ ಯಿಂದಲೂ ಉತ್ತರ ಕಾಂಡವು ಇತರ ಕಾಂಡಗಳ ಎತ್ತರಕ್ಕೆ ಏರುವುದಿಲ್ಲ. ಯುದ್ಧಕಾಂಡವು ಫಲಸ್ತುತಿಯಿಂದ ಮುಗಿಯು ವುದರಿಂದ ಉತ್ತರಕಾಂಡವು ಪ್ರಕ್ಷಿಪ್ತ. ಮಹಾಭಾರತದಲ್ಲಿ ಬರುವ ರಾಮೋಪಾಖ್ಯಾನದಲ್ಲಿ ಉತ್ತರ ಕಾಂಡದ ರಾಮಕಥೆ ಬರುವುದಿಲ್ಲ. ಈ ದೃಷ್ಟಿಗಳಿಂದ ಉತ್ತರ ಕಾಂಡವು ಪ್ರಕ್ಷಿಪ್ತ ವೆಂಬುದರಲ್ಲಿ ಸಂದೇಹ ಬರುವುದಿಲ್ಲ. ಬಾಲಕಾಂಡವು ಸಂಪೂರ್ಣವಾಗಿ ಪ್ರಕ್ಷಿಪ್ತವೆಂದು ಹೇಳುವಂತಿಲ್ಲ. ಕೆಲವು ಸರ್ಗಗಳು ಮಾತ್ರ ಪ್ರಕ್ಷಿಪ್ತವೆಂದು ವಿದ್ವಾಂಸರ ಅಭಿಪ್ರಾಯ.

ರಾಮಾಯಣದಲ್ಲಿ ಪ್ರಕ್ಷೇಪವೆಂದು ಹೇಳಲ್ಪಡುವ ಕೆಲವು ಮುಖ್ಯ ಭಾಗಗಳನ್ನು ಹೀಗೆ ಗುರುತಿಸಬಹುದು:

೧. ಬಾಲಕಾಂಡದ ಮೊದಲ ನಾಲ್ಕು ಸರ್ಗಗಳು, ಸಗರ, ವಿಶ್ವಾಮಿತ್ರ, ತ್ರಿಶಂಕು, ಪರಶುರಾಮ—ಇವರ ಜೀವನ ಕಥೆಯ ಉಲ್ಲೇಖಗಳು.

೨. ರಾಮನು ಅವತಾರನೆಂದು ವರ್ಣಿಸಿರುವ ಭಾಗ.

೩. ಲಂಕಾದಹನದ ಪ್ರಸಂಗ.

೪. ಅಗಸ್ತ್ಯ ಮಹರ್ಷಿ ರಾಮನಿಗೆ ಆದಿತ್ಯ ಹೃದಯವನ್ನು ಬೋಧಿಸಿದ ಭಾಗ.

೫. ಸಮಸ್ತ ಉತ್ತರಕಾಂಡ.

ರಾಮಾಯಣದ ಪ್ರಕ್ಷಿಪ್ತ ಭಾಗಗಳನ್ನು ಚರ್ಚಿಸಲು ಇಲ್ಲಿ ಅವಕಾಶವಿಲ್ಲ. ಈ ವಿಚಾರವಾಗಿ ಹೆಚ್ಚಿನ ಸಂಶೋಧನೆ ಅಗತ್ಯ. ಬರೋಡಾದ ಪ್ರಾಚ್ಯ ವಿದ್ಯಾ ಸಂಸ್ಥೆಯವರು ರಾಮಾಯಣದ ಪರಿಷ್ಕೃತ ಪಾಠವನ್ನು ಪ್ರಕಟಿಸಿದ್ದಾರೆ. ಈ ಸಂಪುಟಗಳಿಂದ ಪ್ರಕ್ಷಿಪ್ತ ಭಾಗಗಳಾವುವು ಎಂಬುದನ್ನು ತಿಳಿಯಲು ಹೆಚ್ಚಿನ ಸೌಲಭ್ಯವಾಗುತ್ತದೆ.

ರಾಮಾಯಣದ ರಚನೆಯ ಕಾಲದ ವಿಚಾರವಾಗಿ ಭಿನ್ನಾಭಿಪ್ರಾಯಗಳಿವೆ. ಈ ಮಹಾಕಾವ್ಯ ತ್ರೇತಾಯುಗದಲ್ಲಿ ಅಂದರೆ ಸುಮಾರು ಕ್ರಿ. ಪೂ. ೮೬೭೧೦೨ ರಲ್ಲಿ ರಚಿತವಾಗಿರಬೇಕೆಂಬ ನಂಬಿಕೆ ಕೆಲವರಲ್ಲಿದೆ. ಕೆ. ಎಸ್. ರಾಮಸ್ವಾಮಿಯವರು ರಾಮಾಯಣದ ರಚನೆಯ ಕಾಲ ಸುಮಾರು ಕ್ರಿ. ಪೂ. ಮೂರು ಸಾವಿರ ಎಂದು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವನ್ನು ಅನೇಕ ವಿದ್ವಾಂಸರು ಒಪ್ಪುವುದಿಲ್ಲ. ಮಾನಿಯರ್ ವಿಲಿಯಮ್ಸ್ ಮತ್ತು ವಿಂಟರ್‌ನಿಟ್ಸ್ ರಾಮಾಯಣ ಮಹಾಕಾವ್ಯದ ರಚನೆಯ ಕಾಲ ಸುಮಾರು ಕ್ರಿ. ಪೂ. ಮೂರನೆಯ ಶತಮಾನವೆಂದು ಅಭಿಪ್ರಾಯಪಡುತ್ತಾರೆ. ಮ್ಯಾಕ್ಡಾನೆಲ್ ಮೊದಲಾದ ವಿದ್ವಾಂಸರು ರಾಮಾಯಣವು ಸುಮಾರು ಕ್ರಿ. ಪೂ. ೪೦೦–೨೦೦ ಈ ಕಾಲದಲ್ಲಿ ರಚಿತವಾಗಿರಬೇಕೆಂದು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವನ್ನು ಸಾಮಾನ್ಯವಾಗಿ ಅನೇಕ ವಿದ್ವಾಂಸರು ಒಪ್ಪಿರುವಂತೆ ಕಾಣುತ್ತದೆ. ರಾಮಾಯಣದ ಕಾಲ ವಿಚಾರವಾಗಿ ಇದೇ ಸರಿ ಎಂದು ಹೇಳುವುದು ಕಷ್ಟದ ಕೆಲಸ.

ಪಾತ್ರ ರಚನೆ

ವಾಲ್ಮೀಕಿ ಮಹರ್ಷಿ ತನ್ನ ಮಹಾಕೃತಿಯಲ್ಲಿ ಮೂಡಿಸಿರುವ ಪಾತ್ರಗಳು ಮಾನವ ಕುಲದ ಆದರ್ಶ ಪ್ರತಿನಿಧಿಗಳಾಗಿ ಚಿರತ್ವವನ್ನು ಪಡೆದಿವೆ. ಸತ್ತ್ವಗುಣವನ್ನಾಗಲಿ ರಜೋಗುಣವನ್ನಾಗಲಿ ತಮೋಗುಣವನ್ನಾಗಲಿ ಹೃದಯದ ಸೂಕ್ಷ್ಮಭಾವಗಳನ್ನಾಗಲಿ ಚಿತ್ರಿಸುವುದರಲ್ಲಿ ವಾಲ್ಮೀಕಿಗೆ ಅದ್ಭುತ ಸಾಮರ್ಥ್ಯವಿದೆ. ವಾಲ್ಮೀಕಿ ಚಿತ್ರಿಸಿದ ಕೆಲವು ಮುಖ್ಯ ಪಾತ್ರಗಳ ಪರಿಚಯ ಮಾಡಿಕೊಡಲು ಇಲ್ಲಿ ಪ್ರಯತ್ನಿಸಿದೆ.

ಶ್ರೀರಾಮ

ಶ್ರೀರಾಮನು ಧರ್ಮಿಷ್ಠನಾದ ದಶರಥನ ಜ್ಯೇಷ್ಠಪುತ್ರ. ತಾಯಿ ಸುಸಂಸ್ಕೃತಳಾದ ಹಿರಿಯ ರಾಣಿ ಕೌಸಲ್ಯೆ. ರಾಮನಿಗೆ ಇನ್ನೂ ಹದಿನಾರು ವರ್ಷ ತುಂಬುವ ಮೊದಲೆ ವಿಶ್ವಾಮಿತ್ರನೊಡನೆ ಸಂತೋಷವಾಗಿ ಯಜ್ಞರಕ್ಷಣೆಯ ಕಾರ್ಯಕ್ಕಾಗಿ ಅರಣ್ಯಕ್ಕೆ ಹೊರಟನು. ಆ ಎಳೆಯ ವಯಸ್ಸಿನಲ್ಲಿ ವಿಶ್ವಾಮಿತ್ರನು ಹೇಳುತ್ತಿದ್ದ ಕಥೆಗಳನ್ನು ಕೇಳುತ್ತ ನಿದ್ದೆ ಹೋಗುತ್ತಿದ್ದನು. ಬೆಳಗ್ಗೆ ನಿಯಮವಂತನಾದ ಋಷಿ ಎಚ್ಚರಿಸಿದರೆ ಅವನು ಕೋಪಗೊಳ್ಳಲಿಲ್ಲ.

"ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಂ" "ಪುರುಷ ಸಿಂಹನೆ, ಎದ್ದೇಳು, ದಿನದ ದೇವತಾ ಪ್ರಾರ್ಥನೆಯನ್ನು ಮಾಡು" ಎಂದು ಹೇಳಿದರೆ, ವಿಧೇಯನಾಗಿ ತನ್ನ ಕರ್ತವ್ಯವನ್ನು ಮಾಡುವ ಶ್ರದ್ಧೆ ಅವನದು. ತಾನು ಅರಸು

ಮಗನೇ ಗರ್ವವಿಲ್ಲದೆ ಋಷಿವರ್ಯನ ಆಜ್ಞಾನುಸಾರ ನಡೆದುಕೊಂಡನು.

ತಾಟಕಿಯ ಸಂಹಾರಕ್ಕಾಗಿ ನಿಂತಾಗ ಸ್ತ್ರೀಹತ್ಯ ಮಾಡ ಬಾರದೆಂಬ ಕನಿಕರದಿಂದ ಆಕೆಯ ತೋಳುಗಳನ್ನು ಮಾತ್ರ ಕತ್ತರಿಸಿದನು. ಅದನ್ನು ಕಂಡು ವಿಶ್ವಾಮಿತ್ರನು "ಸಂಧ್ಯಾ ಕಾಲ ಸಮೀಪಿಸುತ್ತಿದೆ, ಬೇಗನೆ ರಾಕ್ಷಸಿಯನ್ನು ಸಂಹರಿಸ ಬೇಕು" ಎಂದು ಆಜ್ಞೆ ಮಾಡಿದಾಗ, ಮರುಮಾತಿಲ್ಲದೆ ತಾಟಕಿ ಯನ್ನು ಸಂಹರಿಸಿದನು. ಋಷಿಗಳಲ್ಲಿ ಅಂತಹ ಭಕ್ತಿ ರಾಮನಿಗೆ. ವಿದೇಹಕ್ಕೆ ಹೋದಾಗ ವಿಶ್ವಾಮಿತ್ರನ ಅಭಿಮತದಂತೆ ಶೈವ ಧನುಸ್ಸನ್ನು ಎತ್ತಿದನು. ಹಿರಿಯರೂ ಪೂಜ್ಯರೂ ತಂದೆಯೂ ಒಪ್ಪಲು ಸೀತೆಯನ್ನು ವಿವಾಹವಾದನು. ಹಿರಿಯರ ಬಳಿ ಅವನು ವಾದ ವಿವಾದಗಳಲ್ಲಿ ಸಾಮಾನ್ಯವಾಗಿ ತೊಡಗುತ್ತಿರ ಲಿಲ್ಲ. ಆದರೆ ಧರ್ಮದ ಪ್ರಶ್ನೆ ಬಂದಾಗ ಎಲ್ಲಕ್ಕಿಂತಲೂ ಧರ್ಮವೇ ರಾಮನ ಜೀವನದಲ್ಲಿ ಮಹತ್ವವನ್ನು ಪಡೆಯುತ್ತಿತ್ತು.

ಅಯೋಧ್ಯೆಗೆ ಹಿಂತಿರುಗಿದ, ಬಳಿಕ ಪತ್ನಿಯೊಡನೆ ರಾಮನು ಹನ್ನೆರಡು ವರ್ಷಗಳು ಸುಖವಾಗಿದ್ದನು. ಅವನನ್ನು ಆಶ್ರಿತ ಜನರಕ್ಷಕ, ಕ್ಷಮಾಶೀಲ, ಸಂಯಮಿ, ವೀರ ಎಂದು ಜನರು ಗೌರವಿಸಿದರು. ಅವನು ಯುವರಾಜನಾಗಬೇಕೆಂದು ದಶರಥನು ಆಶಿಸಿದಾಗ ಮಂತ್ರಿಗಳೂ ಪುರಜನರೂ ಏಕಕಂಠದಿಂದ ಹರ್ಷ ಘೋಷ ಮಾಡಿದರು. ಮಂಥರೆಯ ದುರ್ಬೋಧೆಯನ್ನು ಕೇಳುವ ಮೊದಲು ಕೈಕೇಯಿಗೆ ರಾಮನಲ್ಲಿ ಪ್ರೀತಿ ಮಾತ್ರವಲ್ಲದೆ ಅವನ ಗುಣಗಳಿಗಾಗಿ ಗೌರವವೂ ಇತ್ತು. ಮಂಥರೆ ರಾಮನ ಯೌವರಾಜ್ಯಾಭಿಷೇಕದ ವೃತ್ತಾಂತವನ್ನು ತಿಳಿಸಿದಾಗ

ಕೈಕೇಯಿ ಸಂತುಷ್ಟಳಾಗಿ ಶುಭಸುದ್ದಿಯನ್ನು ತಂದ ಮಂಥರೆಗೆ ದಿವ್ಯಾಭರಣವನ್ನೆ ಬಹುಮಾನವಾಗಿ ಕೊಟ್ಟಳು.

ರಾಮೇ ವಾ ಭರತೇ ವಾಹಂ ವಿಶೇಷಂ ನೋಪಲಕ್ಷಯೇ ।
ತಸ್ಮಾತ್ತುಷ್ಟಾಸ್ಮಿ ಯದ್ರಾಜಾ ರಾಮಂ ರಾಜ್ಯೇಽಭಿಷೇಕ್ಷ್ಯತಿ ॥

"ರಾಮನಲ್ಲಾಗಲಿ ಭರತನಲ್ಲಾಗಲಿ ನನಗೆ ಭೇದವಿಲ್ಲ ಇಬ್ಬರೂ ನನಗೆ ಸಮ. ದಶರಥನು ರಾಮನಿಗೆ ಯೌವರಾಜ್ಯಾಭಿಷೇಕ ಮಾಡಬೇಕೆಂದಿರುವುದು ನನಗೆ ತುಷ್ಟಿಯನ್ನುಂಟು ಮಾಡಿದೆ."

ಧರ್ಮಜ್ಞೋ ಗುರುಭಿರ್ದಾಂತಃ ಕೃತಜ್ಞಃ ಸತ್ಯವಾಕ್ ಶುಚಿಃ ॥
ರಾಮೋ ರಾಜ್ಞಃ ಸುತೋ ಜ್ಯೇಷ್ಠೋ ಯೌವರಾಜ್ಯಮತೋಽರ್ಹತಿ ॥

"ರಾಮನು ಧರ್ಮಜ್ಞ, ಗುರುಗಳಿಂದ ಶಿಕ್ಷಿತನು, ಕೃತಜ್ಞನು, ಸತ್ಯವಚನನು, ಶುಚಿ ಶೀಲವುಳ್ಳವನು. ಜ್ಯೇಷ್ಠಪುತ್ರನು. ಆದ್ದರಿಂದ ಯುವರಾಜನಾಗಲು ಯೋಗ್ಯನು."

ಕೈಕೇಯಿ ರಾಮನು ಯೌವರಾಜ್ಯಾಭಿಷಿಕ್ತನಾಗುವನೆಂಬುದನ್ನು ಕೇಳಿ ಇಷ್ಟು ಸಂತೋಷಪಡಲು ರಾಮನ ಆದರ್ಶ ಗುಣಗಳೆ ಕಾರಣ. ಕೈಕೇಯಿ ರಾಮನನ್ನು ವನವಾಸಕ್ಕೆ ಕಳುಹಿಸಿದ್ದು ಮಂಥರೆಯ ದುರ್ಬೋಧನೆಯಿಂದ. ರಾಮನ ಮೇಲಿನ ಕೋಪದಿಂದಲ್ಲ.

ವನವಾಸಕ್ಕೆ ತಾನು ಹೋಗಬೇಕೆಂಬುವನ್ನು ಕೇಳಿದಾಗ ರಾಮನು ಸ್ವಲ್ಪಕಾಲ ನಿಶ್ಚಲನಾದನು. ಆದರೆ ಸ್ವಲ್ಪ ಹೊತ್ತಿನಲ್ಲಿಯೆ ಮನಸ್ಸಿನ ಏರಿಳಿತಗಳನ್ನು ಶಾಂತಮಾಡಿಕೊಂಡು

ಅರಣ್ಯಕ್ಕೆ ಹೋಗಲು ಸಂತೋಷದಿಂದ ಒಪ್ಪಿಕೊಂಡನು. ತನ್ನ ಹೃದಯದ ದುಃಖವನ್ನು ತಂದೆಯ ಮುಂದಾಗಲಿ ತಾಯಿ ಕೌಸಲ್ಯೆಯ ಮುಂದಾಗಲಿ ತೋರಲಿಲ್ಲ. ಸೀತೆ ಯೌವರಾಜ್ಯಾಭಿಷೇಕಕ್ಕೆಂದು ಸಕಲ ಅಲಂಕಾರಗಳಿಂದ ಭೂಷಿತೆಯಾಗಿರುವುದನ್ನು ಕಂಡಾಗ ಅವನಿಗೆ ಬಹು ದುಃಖವಾಯಿತು. ಎಷ್ಟು ಬಿಗಿ ಹಿಡಿದರೂ ಆ ನೋವು ಸೀತೆಯ ಮುಂದೆ ಪ್ರಕಟವಾಯಿತು. ರಾಮನು ಮಾನವನೆಂಬುದನ್ನು ವಾಲ್ಮೀಕಿ ಮರೆಯಲಿಲ್ಲ. ರಾಮನಿಗೂ ಸಾಮಾನ್ಯರಿಗಿರುವ ಕೋಪತಾಪಗಳು ಬರಬಹುದು. ಆದರೆ ಸಾಮಾನ್ಯರಂತೆ ಉದ್ವೇಗಕ್ಕೆ ಒಳಗಾಗದೆ ಸಂಯಮದಿಂದಲೂ ವಿವೇಕದಿಂದಲೂ ಧರ್ಮಮಾರ್ಗದಲ್ಲಿ ನಡೆಯುವುದು ಅವನ ಸ್ವಭಾವ.

ರಾಮನ ವನವಾಸ ವಾರ್ತೆಯನ್ನು ಕೇಳಿದ ಲಕ್ಷ್ಮಣನು ತಂದೆಯನ್ನೆ ಕೊಲ್ಲುವೆನೆಂದು ಗರ್ಜಿಸಿದನು. ತಾಯಿ ಕೌಸಲ್ಯೆ ಅಪಾರ ದುಃಖದಿಂದ ಮಗನು ಅರಣ್ಯಕ್ಕೆ ಹೋಗಬಾರದೆಂದು ಆಜ್ಞೆ ಮಾಡಿದಳು. ತಾಯಿಯ ಮನಸ್ಸನ್ನು ಧರ್ಮದಿಂದ ಹರಿಸಿ, ಲಕ್ಷ್ಮಣನನ್ನು ಸಮಾಧಾನಮಾಡಿ ತನ್ನ ಹೃದಯದ ನೋವನ್ನು ಮರೆತು ಬಿಡುವ ಅದ್ಭುತ ಶಕ್ತಿ ರಾಮನದು. ರಾಮನೊಡನೆ ಸೀತೆಯೂ ಲಕ್ಷ್ಮಣನೂ ಕಾಡಿಗೆ ಬರುವುದಾಗಿ ಹಠ ಹಿಡಿದರು. ಬೇಡವೆಂದು ಎಷ್ಟು ಹೇಳಿದರೂ ಅವರು ಕೇಳಲಿಲ್ಲ. ಅವರ ಅಪಾರ ಪ್ರೀತಿಯನ್ನು ಕಂಡು ರಾಮನು ಒಪ್ಪಬೇಕಾಯಿತು. ಅಯೋಧ್ಯಾ ಕಾಂಡದಲ್ಲಿ ಬರುವ ರಾಮನ ಪಿತೃಭಕ್ತಿ, ಮಾತೃಪ್ರೇಮ, ಭ್ರಾತೃಪ್ರೇಮ, ದಾಂಪತ್ಯ ಜೀವನದ ಮಧುರ ಬಂಧನ ಮೊದಲಾದ ಜೀವನ ಚಿತ್ರಗಳು ಹೃದಯದ ಮೇಲೆ ಚಿರಮುದ್ರಿತವಾಗುತ್ತವೆ.

ಸೀತಾ ರಾಮಲಕ್ಷ್ಮಣರು ರಥದಲ್ಲಿ ಕುಳಿತು ಅಯೋಧ್ಯೆ ಯಿಂದ ತೆರಳುವಾಗ ಪುರಜನರ ಪ್ರೀತಿಯನ್ನೂ ದುಃಖವನ್ನೂ ಕಂಡು ರಾಮನಿಗೆ ಅತಿ ವ್ಯಾಕುಲವಾಯಿತು. ಆದರೆ ಜನರ ಪ್ರೀತಿಯ ಬಂಧನಕ್ಕೆ ಸಿಕ್ಕುವುದು ಸಾಧ್ಯವಿರಲಿಲ್ಲ. ಆದ್ದರಿಂದ ಮನಸ್ಸನ್ನು ಕಠೋರವಾಗಿ ಮಾಡಿ ಸುಮಂತ್ರನಿಗೆ ರಥವನ್ನು ವೇಗವಾಗಿ ಓಡಿಸಲು ಹೇಳಿದನು. ಅರಣ್ಯವನ್ನು ಸೇರಿದ ಬಳಿಕ ಸುಮಂತ್ರನನ್ನು ಸಂತೈಸಿ ಅಯೋಧ್ಯೆಗೆ ಕಳುಹಿಸುವುದು ಅವನಿಗೆ ಸುಲಭದ ಕೆಲಸವಾಗಿರಲಿಲ್ಲ. ಪ್ರೀತಿಯ ಬಂಧನ ದಿಂದ ಪಾರಾಗುವುದು ರಾಮನಿಗೆ ಅತಿ ಕಷ್ಟವಾಯಿತು. ಭರ ದ್ವಾಜಾಶ್ರಮದಲ್ಲಿ ತಂಗಿ, ಋಷಿಯ ಆಶೀರ್ವಾದವನ್ನು ಪಡೆದು, ಚಿತ್ರಕೂಟದಲ್ಲಿ ನೆಲಸಿದಾಗ ಅರಣ್ಯದ ವಿಪುಲ ಸೌಂದರ್ಯ ಅವನಿಗೆ ಶಾಂತಿಯನ್ನೂ ಆನಂದವನ್ನೂ ನೀಡಿತು. ಆ ಸಮ ಯದಲ್ಲಿ ಭರತನು ಬಂದು ದಶರಥನು ಕಾಲವಾದ ಶೋಕವಾರ್ತೆ ಯನ್ನು ತಿಳಿಸಿ ರಾಮನು ಅಯೋಧ್ಯೆಗೆ ಬರಬೇಕೆಂದು ಹಠ ಹಿಡಿದು, ಬಾರದಿದ್ದರೆ ಪ್ರಾಯೋಪವೇಶ ಮಾಡಲೂ ಸಿದ್ಧನಾ ದನು. ಆಗ ಅವನನ್ನು ಸಂತೈಸಿ ಕಳುಹಿಸಬೇಕಾದರೆ ರಾಮನಿಗೆ ಸಾಕಾಗಿ ಹೋಯಿತು. ತಮ್ಮನು ಇಂತಹ ಪ್ರೀತಿಯನ್ನು ತೋರಿ ಅಯೋಧ್ಯೆಗೆ ಹಿಂತಿರುಗಬೇಕೆಂದು ಬೇಡಿಕೊಳ್ಳುವಾಗ ಎಂತವರ ಮನಸ್ಸಾದರೂ ಕರಗೀತು! ಆದರೆ ರಾಮನ ಅಸಾ ಧಾರಣ ಧರ್ಮದೃಷ್ಟಿಯೆ ಎಲ್ಲ ಆಸೆಗಳನ್ನೂ ಗೆಲ್ಲುವಂತೆ ಮಾಡಿತು.

ಭರತನನ್ನು ಅಯೋಧ್ಯೆಗೆ ಕಳುಹಿಸಿ ರಾಮನು ಪಂಚವಟಿಗೆ ಹೊರಟನು. ಅಲ್ಲಿಯ ನಿರ್ಮಲ ಪ್ರಕೃತಿಯೊಡನೆ ತನ್ಮಯ ನಾಗಿ ರಾಮನು ನಿಶ್ಚಿಂತನಾಗಿದ್ದನು. ಈ ಸಮಯದಲ್ಲಿ

ರಾಕ್ಷಸರ ಹಾವಳಿ ಪ್ರಾರಂಭವಾಯಿತು. ರಾವಣನು ಸೀತೆಯನ್ನು ಅಪಹರಿಸಿದ ಮೇಲೆ ರಾಮನು ಶೋಕ ವಿರಹಗಳಿಂದ ಬಳಲಿದನು. ಪ್ರಿಯೆಯೂ ಮೃದುಭಾಷಿಯೂ ಆದ ಸೀತೆಯನ್ನು ಕಾಣದ ಅವನ ದುಃಖಕ್ಕೆ, ಪಾರವಿಲ್ಲದೆ ಹೋಯಿತು. ಅಯೋಧ್ಯೆಗೆ ಹೇಗೆ ಹಿಂತಿರುಗುವುದು ? ಜನಕ ಮಹಾರಾಜನಿಗೆ ಏನೆಂದು ಹೇಳುವುದು ? ಎಂದು ಮರುಗಿದನು. ಸೀತೆಗಾಗಿ ಹಂಬಲಿಸುತ್ತ ಅಲೆಯುತ್ತಿದ್ದ ರಾಮನಿಗೆ ಸುಗ್ರೀವನು ಋಷ್ಯಮೂಕ ಪರ್ವತದಲ್ಲಿ ದೊರೆತ ಆಭರಣಗಳನ್ನೂ ಉತ್ತರೀಯವನ್ನೂ ತೋರಿಸಿದನು. ಅವು ಸೀತೆಯವೆಂದು ತಿಳಿದ ಮೇಲೆ ರಾಮನ ದುಃಖವೂ ಕ್ರೋಧವೂ ಹೆಚ್ಚಾಯಿತು. ಸುಗ್ರೀವನ ವಿಚಾರವನ್ನು ಕೇಳಿ ಅವನಲ್ಲಿ ರಾಮನಿಗೆ ಅನುಕಂಪವಾಯಿತು. ಅವನೊಡನೆ ಅಗ್ನಿ ಸಾಕ್ಷಿಯಾಗಿ ಮೈತ್ರಿ ಬೆಳೆಸಿದನು. ಸುಗ್ರೀವನ ಶತ್ರುವಾದ ವಾಲಿ, ರಾಮನ ಶತ್ರುವೂ ಆದುದರಿಂದ ಅವನ ವಧೆಯಾಯಿತು. ವಾಲಿಯನ್ನು ವೀರನಂತೆ ಎದುರಿಸದೆ ಮರೆಯಲ್ಲಿ ನಿಂತು ಕೊಂದುದನ್ನು ಕೆಲವರು ವಿಮರ್ಶಕರು ಟೀಕೆ ಮಾಡಿದ್ದಾರೆ. ಈ ವಿಚಾರವಾಗಿ ಪರ ಮತ್ತು ವಿರೋಧವಾಗಿ ಸಮರ್ಥನೆ ಮಾಡುವವರಿದ್ದಾರೆ. ಈ ವಾಲಿವಧೆಯ ಪ್ರಸಂಗ ರಾಮನ ಪಾತ್ರದ ಒಂದು ದೋಷವೆಂದು ಹೇಳಿದರೆ ರಾಮನ ವ್ಯಕ್ತಿತ್ವಕ್ಕೆ ಲೋಪವೇನೂ ಬರುವುದಿಲ್ಲ. ದಿನ ಬೆಳಗಾದರೆ ತಪ್ಪುಗಳ ಮಧ್ಯೆ ಬದುಕುವ ಮಾನವನು ಜೀವನದಲ್ಲಿ ಎಲ್ಲಿಯೋ ಒಂದು ತಪ್ಪು ಮಾಡಿದ ರಾಮನ ವಿಚಾರದಲ್ಲಿ ಅಸಮಾಧಾನ ತಾಳಬೇಕಾದ ಪ್ರಮೇಯವಿಲ್ಲ.

ಸೀತಾನ್ವೇಷಣೆಗಾಗಿ ಮಳೆಗಾಲ ಕಳೆಯುವವರೆಗೆ ಕಾಯು

ಬೇಕಾಯಿತು. ಆ ನಾಲ್ಕು ತಿಂಗಳು ಕಳೆಯುವುದು ರಾಮನಿಗೆ ನೂರಾರು ವರ್ಷಗಳಂತೆ ಕಂಡಿತು.

"ಚತ್ವಾರೋ ವಾರ್ಷಿಕಾ ಮಾಸಾ ಗತಾ ವರ್ಷಶತೋಪಮಾಃ |"

ಆಕಾಶವು ಶರದಾಗಮನದಿಂದ ಪ್ರಸನ್ನವಾಯಿತು. ಬಲಾಕಾ ಸಮೂಹಗಳು ಎಲ್ಲೆಡೆಯೂ ಹಾರಾಡಲಾರಂಭಿಸಿದುವು. ಕೆಲವು ತರುಗಳಲ್ಲಿ ಹೂವು ಅರಳಲು ಪ್ರಾರಂಭವಾಯಿತು. ಸಪ್ತ ಪರ್ಣದ ಪುಷ್ಪರಾಶಿಯಂತೂ ಅರಳಿ ಬಿರಿಯುತ್ತಿತ್ತು. ವೃಕ್ಷ ಗಳಲ್ಲಿ ಗೀತಶೀಲವಾದ ದುಂಬಿಗಳು ಪರಿಭ್ರಮಿಸುತ್ತಿದ್ದುವು. ಮೇಘ ಸಮೂಹಗಳು ತಮ್ಮ ಕಾಳಿಕೆಯನ್ನು ಕಳೆದುಕೊಂಡು ಹಗುರವಾಗಿ ಸಂಚರಿಸತೊಡಗಿದುವು. ಈ ಸಮಯದಲ್ಲಿ ಹನುಮಂತನು ಸಮುದ್ರವನ್ನು ದಾಟಿ ಲಂಕೆಗೆ ಹೋಗಿ ಸೀತಾ ವಾರ್ತೆಯನ್ನು ತಂದನು. ಹನುಮಂತನನ್ನು ಪುರಸ್ಕರಿಸಲು ರಾಮನ ಬಳಿ ಏನೂ ಇರಲಿಲ್ಲ. ಅಯೋಧ್ಯೆಯಲ್ಲಿದ್ದರೆ ತಕ್ಕ ಬಹುಮಾನವನ್ನು ಕೊಡುತ್ತಿದ್ದನು. ಆದರೆ ಅರಣ್ಯವಾಸಿ ಯಾದ ರಾಮನು ಅವನನ್ನು ಆಲಿಂಗಿಸಿ ತನ್ನ ಕೃತಜ್ಞತೆಯನ್ನು ತೋರಿದನು. ರಾಮನು ಕಾರ್ಯಕ್ಕೆ ಪ್ರವೇಶಿಸಿದರೆ ಯಾವ ತೊಂದರೆಗಳು ಬಂದರೂ ದಾಟುವ ಮನೋದಾರ್ಢ್ಯವುಳ್ಳವನು.

"ಅದ್ಯ ಮೇ ಮರಣಂ ವಾಪಿ ತರಣಂ ಸಾಗರಸ್ಯ ವಾ "|

ಅವನ ಅದ್ಭುತ ಕಾರ್ಯಸಾಧನೆಯಲ್ಲಿ ಛಲವೂ ಇತ್ತು. ಕಾರ್ಯಸಾಧನೆ, ಇಲ್ಲವೆ ಮರಣವೆಂಬುದು ಅವನ ಹಠ.

ರಾಮನು ಕೇವಲ ಆದರ್ಶಪುತ್ರ, ಆದರ್ಶ ಸಹೋದರ, ಆದರ್ಶ ಸ್ನೇಹಿತ, ಆದರ್ಶ ಪತಿ ಮಾತ್ರನಾಗಿರದೆ ಆದರ್ಶ

ಶತ್ರುವೂ ಹೌದು. ರಾವಣನ ಗೂಢಚಾರರಾದ ಶುಕ ಸಾರಣರು ಸಿಕ್ಕಿಬಿದ್ದಾಗ ಅವರನ್ನು ಶಿಕ್ಷಿಸದೆ, ರಾಮ ತನ್ನ ಕಡೆಯ ಸೈನ್ಯವೆಲ್ಲವನ್ನೂ ತೋರಿಸಿ ಕಳುಹಿಸಿದನು. ಅವನ ಹೃದಯದ ಔನ್ನತ್ಯವನ್ನು ಕಂಡು ವಾಲ್ಮೀಕಿ 'ರಿಪೂಣಾಪಿ ವತ್ಸಲಃ' ಶತ್ರುಗಳಲ್ಲಿಯೂ ವಾತ್ಸಲ್ಯವುಳ್ಳವನೆಂದು ಕರೆದಿರುವುದು. ರಾವಣನೊಡನೆ ನಡೆದ ಯುದ್ಧ ಬೃಹತ್ ಪ್ರಮಾಣದಲ್ಲಿಯೆ ನಡೆಯಿತು. ಆ ಯುದ್ಧವನ್ನು ವರ್ಣಿಸುತ್ತ ವಾಲ್ಮೀಕಿ ಅದರ ಅನನ್ಯತೆಯನ್ನು ಕುರಿತು ಹೀಗೆ ಹೇಳಿದ್ದಾನೆ:

"ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ"

ರಾಮರಾವಣರ ಯುದ್ಧಕ್ಕೆ ಸಮನಾದುದು ಬೇರೆಯಾವುದನೂ ಕಾಣದೆ ಆ ಯುದ್ಧಕ್ಕೆ ಅದೇ ಸದೃಶವೆಂದು ಸಾರಿ ವಾಲ್ಮೀಕಿ ಆ ಯುದ್ಧದ ಅಗಾಧತೆಯನ್ನು ಚಿತ್ರಿಸಿದ್ದಾನೆ. ಹೋಮರನ ಇಲಿಯಡ್ ಕಾವ್ಯದಲ್ಲಿ ವಿಜಯಿಯಾದ ಅಕಿಲಿಸ್ ಹೆಕ್ಟರನ ಶವವನ್ನು ಬಂಡಿಗೆ ಕಟ್ಟಿ ಎಳೆಯಬೇಕೆಂದಿರುವುದು ಅವನ ತಾಮಸ ಪ್ರವೃತ್ತಿಯನ್ನು ತೋರುತ್ತದೆ. ರಾವಣನ ವಧೆಯಾದ ಬಳಿಕ ಅವನ ಶವಸಂಸ್ಕಾರವಾಗಬೇಕೆಂದು ಹೇಳುತ್ತಾನೆ ರಾಮ. ಅಧರ್ಮಿಯನ್ನು ಕೊಂದ ಮೇಲೆ ಅವನ ಶವದ ಮೇಲೂ ದ್ವೇಷ ಸಾಧಿಸುವುದು ರಾಕ್ಷಸೀಯತೆ. ರಾಮನಿಗೆ ಕೋಪವಿದ್ದುದು ರಾವಣನ ಅಧರ್ಮದ ಮೇಲೆ. ಧರ್ಮ ರಕ್ಷಣೆಗಾಗಿ ಅವನನ್ನು ವಧಿಸಬೇಕಾಯಿತು.

ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್ ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥

"ಶತ್ರುವಿನ ಮರಣದೊಂದಿಗೆ ವೈರವೂ ಮುಗಿಯುತ್ತದೆ; ನನ್ನ ಪ್ರಯೋಜನ ಕೈಗೂಡಿತು. ಈತನ ಶವ ಸಂಸ್ಕಾರ ಮಾಡಲ್ಪಡಲಿ. ವಿಭೀಷಣ, ರಾವಣನು ನಿನಗೆಂತೊ, ಅಂತೆಯೆ ನನಗೆ" ಎಂದು ಹೇಳಿದ ರಾಮನ ಶೀಲದ ಈ ಔನ್ನತ್ಯ ಅವನು ಆದರ್ಶ ಶತ್ರುವೂ ಆಗಿದ್ದನೆಂಬುದನ್ನು ವ್ಯಕ್ತಪಡಿಸುತ್ತದೆ.

ರಾವಣನ ವಧೆಯಾದನಂತರ ಸೀತೆಯನ್ನು ಕಂಡೊಡನೆ ರಾಮನು ಭಾವ ಪರವಶನಾಗಿ ಅವಳನ್ನು ಆಲಿಂಗಿಸಲಿಲ್ಲ. ಎಲ್ಲರಿಗೂ ಆಶ್ಚರ್ಯವೂ ಖೇದವೂ ಆಗುವ ರೀತಿಯಲ್ಲಿ ರಾಮನು ನಡೆದುಕೊಂಡನು. ಸೀತೆಯನ್ನು ಕುರಿತು, "ಲಕ್ಷ್ಮಣನ ಬಳಿಗೊ ಭರತನ ಬಳಿಗೊ ಸುಗ್ರೀವನ ಬಳಿಗೊ ನಿನ್ನ ಇಚ್ಛೆ ಬಂದವರ ಬಳಿಗೊ ಹೋಗಿ ಸುಖವಾಗಿರು" ಎಂದು ಹೇಳಿದನು.

ಲಕ್ಷ್ಮಣೇ ಭರತೇ ವಾ ತ್ವಂ ಕುರುಬುದ್ಧಿಂ ಯಥಾಸುಖಮ್ ॥
ಸುಗ್ರೀವೇ ವಾನರೇಂದ್ರೇ ವಾ ರಾಕ್ಷಸೇಂದ್ರೇ ವಿಭೀಷಣೇ ।
ನಿವೇಶಯ ಮನಃ ಸೀತೇ ಯಥಾ ವಾ ಸುಖಮಾತ್ಮನಃ ॥

ಸೀತೆಯನ್ನು ಕುರಿತು ರಾಮನು ಹೀಗೆ ಹೇಳುವುದನ್ನು ಕೇಳಿದಾಗ ರಾಮನಲ್ಲಿ ಇದ್ದಕ್ಕಿದ್ದಂತೆ ಗೌರವ ಕಡಿಮೆಯಾಗುತ್ತದೆ. ಆದರೆ ತಾಳ್ಮೆಯಿಂದ ವಿಮರ್ಶೆ ಮಾಡಿದರೆ ಅವನ ಹೃದಯದ ಒಳತೋಟಿ ನಮಗೆ ತಿಳಿಯುತ್ತದೆ. ರಾಮನು ದಾಂಪತ್ಯ ಜೀವನದ ಮಧುರ ಅನುಭವವುಳ್ಳವನು. ಅವನ ವಿರಹವನ್ನು ತಿಳಿದವರು ಅವನ ಅಪಾರ ಪ್ರೇಮವನ್ನು ತಿಳಿದುಕೊಂಡಿರುತ್ತಾರೆ. ಇಂತಹ ಅತಿಶಯವಾದ ಪ್ರೇಮವಿದ್ದರೂ ಜನರಲ್ಲಿ

ಬುದ್ಧಿಭೇದವನ್ನುಂಟುಮಾಡಬಾರದೆಂಬ ಸದುದ್ದೇಶದಿಂದ ರಾಮನು ಅಷ್ಟು ಕಠೋರ ರೀತಿಯಲ್ಲಿ ವರ್ತಿಸಿದನೆಂಬುದು ಸಹೃದಯತೆಯಿಂದ ವೀಕ್ಷಿಸಿದಾಗ ತಿಳಿಯುತ್ತದೆ. ಜನಾಪವಾದದಿಂದ ಸೀತೆಯನ್ನು ನಿರ್ಮಲಗೊಳಿಸಲೆಂದೆ ವಾಲ್ಮೀಕಿ ಅಗ್ನಿ ಪರೀಕ್ಷೆಯ ಪ್ರಕರಣವನ್ನು ಚಿತ್ರಿಸಿರುವಂತೆ ಕಾಣುತ್ತದೆ. ಕೆಲವು ವಿಮರ್ಶಕರು ರಾಮನು ಈ ಸಮಯದಲ್ಲಿ ಸೀತೆಯನ್ನು ಅತಿ ಕಠೋರವಾಗಿ ಕಂಡುದನ್ನು ಟೀಕಿಸಿದ್ದಾರೆ. ಈ ಅಗ್ನಿ ಪರೀಕ್ಷೆಯ ಪ್ರಕರಣ ಪ್ರಕ್ಷಿಪ್ತವೆಂದೂ ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ವಿಚಾರದಲ್ಲಿ ಯಾವುದು ಸರಿ ಎಂದು ಸಮರ್ಥಿಸುವುದು ಕಷ್ಟ.

ಲಂಕೆಯನ್ನು ಬಿಟ್ಟು ಅಯೋಧ್ಯೆಗೆ ಹಿಂತಿರುಗುವಾಗ ದಾರಿಯಲ್ಲಿ ರಾಮನು ಭರದ್ವಾಜಾಶ್ರಮದಲ್ಲಿ ತಂಗಿದನು. ಆಗ ಭರತನ ಮನಸ್ಸಿನ ಇಂಗಿತವನ್ನು ತಿಳಿಯುವ ಆಸೆಯಾಗಿ ಹನುಮಂತನನ್ನು ಭರತನ ಬಳಿಗೆ ಕಳುಹಿಸಿದನು. ಭರತನು ರಾಜ್ಯವನ್ನು ಬಯಸುವುದಾದರೆ ಅರಣ್ಯದಲ್ಲಿಯೆ ಇರುವ ಬಯಕೆ ರಾಮನದು. ಭರತನಲ್ಲಿ ಅಪನಂಬಿಕೆ ರಾಮನಿಗಿರಲಿಲ್ಲ. ಆದರೆ ತಮ್ಮನಿಗೆ ರಾಜ್ಯದಾಸೆ ಮೂಡಿದ್ದರೆ ಅವನಿಗೆ ತೊಂದರೆಯಾಗದಂತೆ ತಾನು ಅರಣ್ಯದಲ್ಲಿಯೆ ಇರುವ ತ್ಯಾಗಬುದ್ಧಿ ಅವನದು.

ಪುತ್ರನಾಗಿ, ಭ್ರಾತೃವಾಗಿ, ಬಂಧುವಾಗಿ, ವೀರನಾಗಿ, ಸ್ವಾಮಿಯಾಗಿ, ಪತಿಯಾಗಿ, ಶತ್ರುವಾಗಿ, ಪ್ರಭುವಾಗಿ ಆದರ್ಶವನ್ನು ಸಾಧಿಸಿದ ಶ್ರೀರಾಮನನ್ನು ಅವತಾರಪುರುಷನೆಂದು ಆರಾಧಿಸಿ ಭಾರತದ ಜನರು ತಮ್ಮ ಬದುಕನ್ನು ಪಾವನಮಾಡಿ

ಕೊಂಡಿದ್ದಾರೆ. ಇಂತಹ ಪುರುಷೋತ್ತಮನ ಗುಣಗಾನವನ್ನು ವಾಲ್ಮೀಕಿಯ ಕೆಲವು ಮಾತುಗಳಲ್ಲಿ ಕೇಳೋಣ:

ಸ ಚ ನಿತ್ಯಂ ಪ್ರಶಾಂತಾತ್ಮಾ ಮೃದು ಪೂರ್ವಂ ಪ್ರಭಾಷತೇ |
ಉಚ್ಯಮಾನೋಽಪಿ ಪರುಷಂ ನೋತ್ತರಂ ಪ್ರತಿಪದ್ಯತೇ ||

"ಅವನು ಸದಾ ಪ್ರಶಾಂತನು. ಪೂರ್ವಭಾವಿಯಾಗಿಯೆ ಮೃದುವಾಗಿ ಮಾತನಾಡುವವನು. ಯಾರಾದರೂ ಕಠಿನವಾಗಿ ಮಾತನಾಡಿದರೆ ಅದಕ್ಕೆ ಪ್ರತಿಯಾಗಿ ಮಾತನಾಡುವವನಲ್ಲ."

ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ |
ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ ||

"ಎಂತಾದರೂ ಮಾಡಿದ ಒಂದು ಉಪಕಾರದಿಂದಲೆ ಅವನು ತುಷ್ಟ. ಇತರರು ನೂರು ಅಪಕಾರಗಳನ್ನು ಮಾಡಿದರೂ ಆತ್ಮವಂತನಾದ ಅವನು ಸ್ಮರಿಸುತ್ತಿರಲಿಲ್ಲ."

ಲೌಕಿಕೇ ಸಮಯಾಚಾರೇ ಕೃತಕಲ್ಪೋ ವಿಶಾರದಃ |
ನಿಸ್ತಂದ್ರಿರಪ್ರಮತ್ತಶ್ಚ ಸ್ವದೋಷ ಪರದೋಷವಿತ್ ||

"ಲೌಕಿಕದಲ್ಲಿ, ಸಮಯಾಚಾರದಲ್ಲಿ ಅವನು ವಿಶಾರದನು, ಕೃತಕಲ್ಪನು, ಆಲಸ್ಯವಿಲ್ಲದವನು, ಜಾಗರೂಕನು. ತನ್ನ ದೋಷವನ್ನೂ ಪರರ ದೋಷವನ್ನೂ ಚೆನ್ನಾಗಿ ತಿಳಿದವನು.

ಸೀ

ಸ್ವಾಮಿ ವಿವೇಕಾನಂದರು ಭಾರತದ ಆದರ್ಶ ಮಹಿಳೆಯ ರನ್ನು ಕುರಿತು ಮಾತನಾಡುವಾಗ "ರಾಮನಂತಹ ಮಹಾ

ಪುರುಷನನ್ನು ಕಂಡರೂ ಕಾಣಬಹುದು, ಸೀತೆಯಂತಹ ಮಹಿಳಾರತ್ನವನ್ನು ಜಗತ್ತಿನಲ್ಲಿ ಕಾಣುವುದು ಅಪೂರ್ವ” ಎಂದು ಹೇಳಿದ್ದಾರೆ. ಒಂದು ದೃಷ್ಟಿಯಲ್ಲಿ ರಾಮಾಯಣವು ಸೀತೆಯ ಚರಿತ್ರೆ “ಸೀತಾಯಾಶ್ಚರಿತಂ”. ಅವಳ ಪತಿಭಕ್ತಿ, ಸಹನೆ, ಗಾಂಭೀರ್ಯ, ದೈವಭಕ್ತಿ ಇವೆಲ್ಲಾ ಭಾರತೀಯ ಸ್ತ್ರೀತ್ವದ ಪರಮ ಆದರ್ಶಗಳಾಗಿ ಇಂದಿಗೂ ಪೂಜಾರ್ಹ ವಾಗಿವೆ.

ಶೀಲ ಸೌಂದರ್ಯಗಳ ತೇಜೋರಾಶಿಯಾದ ಸೀತೆ ಪುರು ಷೋತ್ತಮನಾದ ಶ್ರೀರಾಮನನ್ನು ವರಿಸಿದ ಸಾಧ್ವಿ. ಚಿಕ್ಕ ವಯಸ್ಸಿನಲ್ಲಿಯೆ ಮದುವೆಯಾಗಿ ಪತಿಯೊಡನೆ ಅಯೋಧ್ಯೆ ಯಲ್ಲಿ ಹನ್ನೆರಡು ವರ್ಷಗಳ ಕಾಲ ಸಂತೋಷವಾಗಿ ಬೆಳೆದಳು. ಅನಂತರ ಅವಳ ಕಷ್ಟ ಪ್ರಾರಂಭವಾಯಿತು. ಅರಣ್ಯದ ಕಷ್ಟ ವನ್ನು ಸೀತೆಗೆ ವಿವರಿಸಿ ಅವಳು ಅಯೋಧ್ಯೆಯಲ್ಲಿಯೇ ಇರ ಬೇಕೆಂದು ರಾಮನು ಎಷ್ಟು ಹೇಳಿದರೂ ಅವಳು ಅವನೊಡನೆ ಹೊರಡುವುದಾಗಿ ಹಠ ಹಿಡಿದಳು. ರಾಮನು ಅದಕ್ಕೂ ಒಪ್ಪಲಿಲ್ಲ. ಆಗ ಹೆಚ್ಚಾದ ದುಃಖದಿಂದಲೂ ಸ್ನೇಹಾಧಿಕ್ಯ ದಿಂದಲೂ ಪತಿಯೆಂಬ ಸಲುಗೆಯಿಂದಲೂ ಕೋಪಗೊಂಡು ಸೀತೆ ಹೀಗೆ ಹೇಳಿದಳು.

> ಕಿಂತ್ವಾಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ |
> ರಾಮ ಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಂ ||

“ರಾಮನೆ, ಮಿಥಿಲಾಧಿಪನಾದ ತಂದೆ ಜನಕನು ಪುರುಷಾ ಕಾರದ ಸ್ತ್ರೀಯಾದ ನಿನ್ನನ್ನು ಅಳಿಯನನ್ನಾಗಿ ಹೇಗೆ ತಿಳಿ ದನು !”

ಸೀತೆಗೆ ಕೋಪಬಂದಾಗ ಮಾತನಾಡುವ ರೀತಿ ಇದು. ಅವಳು ತನ್ನ ಸ್ವಾರ್ಥಕ್ಕಾಗಿ ಈ ಮಾತುಗಳನ್ನು ಆಡಲಿಲ್ಲ. ಪತಿಯನ್ನು ಒಂದು ಕ್ಷಣವೂ ಬಿಟ್ಟಿರಲಾರದ ಪ್ರೇಮಭಾವ ದಿಂದ ಹೇಳಿದ ಮಾತುಗಳಿವು. ಸೀತೆಯಂತಹವಳು ಈ ರೀತಿ ಮಾತನಾಡುವುದು ಸ್ವಲ್ಪಮಟ್ಟಿಗೆ ಆಶ್ಚರ್ಯವನ್ನುಂಟುಮಾಡ ಬಹುದು. ಆದರೆ ಸೀತೆಯ ಪತಿಪ್ರೇಮವನ್ನು ಅರ್ಥಮಾಡಿ ಕೊಳ್ಳದಿದ್ದರೆ ಸೀತೆಯ ಪಾತ್ರಕ್ಕೆ ಅನ್ಯಾಯ ಮಾಡಿದಂತಾಗು ತ್ತದೆ. ಸೀತೆ ಮತ್ತೆ ಈ ರೀತಿಯಾಗಿ ತನ್ನ ಹೃದಯವನ್ನು ರಾಮನ ಮುಂದಿಟ್ಟಳು.

ದ್ಯುಮತ್ಸೇನ ಸುತಂ ವೀರಂ ಸತ್ಯವಂತಮನುವ್ರತಾ ।
ಸಾವಿತ್ರೀಮಿವ ಮಾಂ ವಿದ್ಧಿ ತ್ವಮಾತ್ಮವಶವರ್ತಿನೀಂ ॥

ಅವಳ ಆದರ್ಶ ಸಾವಿತ್ರಿಯಂತೆ ಪತಿಯ ಸಾಮಿಪ್ಯದಲ್ಲಿಯೆ ಇರುವುದು. ಈ ಮಾತುಗಳನ್ನು ಕೇಳಿ ರಾಮನು ಕೋಪಿಸ ಲಿಲ್ಲ. ಅವನು ತನ್ನ ಮಡದಿಯನ್ನು ಚೆನ್ನಾಗಿ ಬಲ್ಲನು. ಅವಳ ಅಭಿಲಾಷೆಯನ್ನು ತಿಳಿದು "ದಂಡಕಾರಣ್ಯದ ಕಷ್ಟ ವನ್ನು ಕುರಿತು ಬೇಡವೆಂದು ಹೇಳಿವೆನೇ ವಿನಾ ಬೇರೆ ಕಾರಣ ದಿಂದಲ್ಲ. ನಿನ್ನನ್ನು ಬಿಟ್ಟು ನನಗೆ ಸ್ವರ್ಗವೂ ರುಚಿಸುವುದಿಲ್ಲ" ಎಂದು ಹೇಳಿ ಸೀತೆಯನ್ನು ಸಂತೈಸಿದನು. ಸೀತೆಯ ಅನು ಪಮವಾದ ಪ್ರೇಮ, ಪತಿಯ ಕಷ್ಟ ಸುಖಗಳಲ್ಲಿ ಸಹಧರ್ಮಿಣಿ ಯಾಗಿರಲು ಪ್ರೇರಿಸಿತ್ತು.

ಅರಣ್ಯವನ್ನು ಪ್ರವೇಶಿಸಿದಾಗ ಅಲ್ಲಿಯ ಕಷ್ಟ ಜೀವನವನ್ನೂ ನಿರ್ಜನತೆಯನ್ನೂ ಕಂಡು ತನ್ನ ವಿಧಿಯನ್ನಾಗಲಿ, ಇಂತಹ ಗಂಡನನ್ನು ಏಕೆ ಕೈ ಹಿಡಿದೆನೆಂದಾಗಲಿ ಎಂದೂ ಒಂದು

ಬಾರಿಯೂ ಸೀತೆ ಯಾರನ್ನೂ ಶಪಿಸಲಿಲ್ಲ. ಅರಮನೆಯ ಸುಖಭೋಗಗಳನ್ನು ಮರೆತು ರಾಮನೊಡನೆ ಅರಣ್ಯದ ಶಿವ ಸೌಂದರ್ಯವನ್ನು ಕಾಣುತ್ತ ಸಂತೋಷವಾಗಿದ್ದಳು.

ಮನುಷ್ಯನ ಯಶಸ್ಸಿಗೆ ಭಂಗತರುವುದು ಮಿಥ್ಯಾವಾಕ್ಯ, ಪರದಾರ ಗಮನ, ಕಾರಣವಿಲ್ಲದೆ ಪರರನ್ನು ಕೊಲ್ಲುವುದು— ಇವು ಮೂರು ಎಂದು ಸೀತೆಗೆ ಚೆನ್ನಾಗಿ ತಿಳಿದಿತ್ತು. ತನ್ನ ಪತಿಯಲ್ಲಿ ಮೊದಲಿನ ಎರಡು ದೋಷಗಳು ಇಲ್ಲವೆಂಬುದು ಅವಳಿಗೆ ಖಚಿತ. ಆದರೆ ಮೂರನೆಯ ವಿಚಾರದಲ್ಲಿ ಅವಳಿಗೆ ಸ್ವಲ್ಪ ಸಂಶಯವಿತ್ತು. ರಾಮನಿಗೆ ಯಾವ ಕೇಡನ್ನೂ ಮಾಡದ ಈ ರಾಕ್ಷಸರನ್ನು ಏಕೆ ಸಂಹರಿಸುತ್ತಾನೆ ಎಂಬುದು ಅವಳಿಗೆ ಒಗಟಾಗಿತ್ತು. ಈ ವಿಚಾರವಾಗಿ ರಾಮನನ್ನು ಕೇಳಿದಳು. ರಾಮನು ಸತ್ಪುರುಷರಾದ ಋಷಿಗಳಿಗೆ ತೊಂದರೆ ಕೊಡುವ ರಾಕ್ಷಸರನ್ನು ವಧಿಸುವುದು ಕ್ಷತ್ರಿಯರ ಧರ್ಮವೆಂದು ಹೇಳಿ ಅವಳನ್ನು ಸಮಾಧಾನಮಾಡಿದನು. ಸ್ತ್ರೀ ಕೇವಲ ಭೋಗವಸ್ತುವಲ್ಲ, ಆಕೆಗೆ ಪತಿಯ ಧರ್ಮಕಾರ್ಯದಲ್ಲಿ ಸಮಾನ ಸ್ಥಾನವಿದೆ ಎಂಬುದನ್ನು ವಾಲ್ಮೀಕಿ ಚಿತ್ರಿಸಿದ್ದಾನೆ.

ಖರದೂಷಣರನ್ನೂ ರಾಕ್ಷಸ ಸೈನ್ಯವನ್ನೂ ಏಕಾಂಗಿಯಾಗಿ ರಾಮನು ವಧಿಸಿ ವಿಜಯಿಯಾಗಿ ಬಂದ ರಾಮನ ಮೈಮೇಲಿನ ಬಾಣದ ಗುರುತುಗಳನ್ನು ಕಂಡು ತನ್ನ ಪ್ರಿಯನಲ್ಲಿ ಅತಿಯಾದ ಮರುಕವೂ ಪ್ರೀತಿಯೂ ಅವನ ಪೌರುಷದಲ್ಲಿ ಗೌರವವೂ ಮೂಡಿತು. ಸ್ತ್ರೀ ಸಹಜವಾದ ಲಜ್ಜೆಯನ್ನು ಬಿಟ್ಟು ಪತಿಯನ್ನು ಮನಃಪ್ರೀತಿಯಾಗಿ ಆಲಂಗಿಸಿದಳು ಸೀತೆ. ಅವಳಿಗೆ ಪತಿಯಲ್ಲಿದ್ದ ಅತಿಶಯವಾದ ಪ್ರೇಮವನ್ನು ತೋರಲು ವಾಲ್ಮೀಕಿ ಒಂದು ರಸ ಸನ್ನಿವೇಶವನ್ನು ಚಿತ್ರಿಸಿದ್ದಾನೆ. ಪ್ರಿಯೆ

ಯಿಂದ ಇದಕ್ಕಿಂತ ಹೆಚ್ಚಿನ ಬಹುಮಾನ ಒಲಿದ ಪ್ರಿಯಸಿಗೆ ಬೇರೆ ಏನು ತಾನೆ ಇರುವುದು ಸಾಧ್ಯ !

ರಾವಣನು ಸೀತೆಯನ್ನು ಕದ್ದೊಯ್ದು ಲಂಕೆಯಲ್ಲಿಟ್ಟು ಪರಿ ಪರಿಯ ಪ್ರಲೋಭನಗಳಿಂದ ಅವಳನ್ನು ವಶಮಾಡಿಕೊಳ್ಳಲು ಪ್ರಯತ್ನಿಸಿದುದು ವ್ಯರ್ಥವಾಯಿತು. ಅವನ ಬೆದರಿಕೆಗಳಿಗೆ ಅವಳು ಹೆದರಲೆ ಇಲ್ಲ. ರಾಕ್ಷಸಿಯರ ಮಧ್ಯೆ ಇದ್ದರೂ ಪತಿಯನ್ನು ಸದಾ ನೆನೆಯುತ್ತಲೆ ಇದ್ದಳು. ರಾವಣನಿಂದ ಪ್ರೇರಿತರಾಗಿ ತನ್ನನ್ನು ಪರಿಪರಿಯಾಗಿ ಪೀಡಿಸುತ್ತಿದ್ದ ರಾಕ್ಷಸಿ ಯರಿಗೆ, "ನನ್ನನ್ನು ಕತ್ತರಿಸಿ ಚೂರುಮಾಡಿ ಅಗ್ನಿಗೆ ಬೇಕಾ ದರೂ ಹಾಕಿ, ರಾವಣನಿಗೆ ವಶೀಭೂತಳಾಗುವವಳಲ್ಲ" ಎಂದು ಸ್ಪಷ್ಟವಾಗಿ ಹೇಳಿದ ವೀರ ಮಹಿಳೆ ಅವಳು. ರಾವಣನ ಅಂಕೆಯಲ್ಲಿದ್ದರೂ ಅವಳ ಮನಸ್ಸು ಒಮ್ಮೆಯೂ ಚಂಚಲವಾ ಗಲಿಲ್ಲ. ಇಂತಹ ಮನೋನಿಶ್ಚಯ ಸ್ತ್ರೀತ್ವಕ್ಕೇ ಆದರ್ಶವಾ ದುದು. ಜೀವನದ ಆದರ್ಶ, ಕಷ್ಟಕಾಲದಲ್ಲಿ ಪರೀಕ್ಷೆಯಾಗು ತ್ತದೆ. ರಾಕ್ಷಸರ ಕಾಟದಿಂದ ಹೇಗಾದರೂ ಪಾರಾಗಿ ಸುಖ ಜೀವನ ನಡೆಸಲು ಅವಳು ಯೋಚಿಸಲಿಲ್ಲ. ಪ್ರಾಣವನ್ನಾ ದರೂ ಅರ್ಪಿಸಿ ತನ್ನ ಶೀಲಗೌರವಗಳನ್ನು ಉಳಿಸಿಕೊಳ್ಳುವ ಮನೋದಾರ್ಢ್ಯ ಅವಳದು.

ಸೀತೆ ರಾಮನನ್ನು ಧ್ಯಾನಿಸುತ್ತ ಬಹುಕಷ್ಟದಿಂದ ರಾಕ್ಷಸಿ ಯರ ಮಧ್ಯೆ ಇದ್ದಾಗ ಹನುಮಂತನು ರಾಮವಾರ್ತೆಯನ್ನು ಹೇಳಿ ರಾಮನು ಕಳುಹಿಸಿದ ಉಂಗುರವನ್ನು ಸೀತೆಗೆ ಒಪ್ಪಿಸಿ ದನು. ಆಗ ಸೀತೆಗೆ ಹೊಸಶಕ್ತಿ ಮೂಡಿದಂತಾಯಿತು. ಅವಳ ಕಷ್ಟವನ್ನು ಕಂಡು ಹನುಮಂತನು ಪರಿತಪಿಸಿ, ಅವಳನ್ನು ತನ್ನ ಬೆನ್ನಮೇಲೆ ಹೊತ್ತುಕೊಂಡು ರಾಮನೆಡೆಗೆ ಕರೆದೊಯ್ಯು

ಪ್ರದಾಗಿ ಹೇಳಿದನು. ಅದಕ್ಕೆ ಸೀತೆ ಒಪ್ಪಲಿಲ್ಲ. ರಾವಣನು ಬಲಾತ್ಕಾರವಾಗಿ ಎಳೆದು ತಂದಾಗ ಅವಳ ಇಚ್ಛೆಗೆ ವಿರುದ್ಧ ವಾಗಿ ಅವನ ಸ್ಪರ್ಶವಾಗಿತ್ತು. ಈಗ ಅವಳಿಗೆ ರಾಮನು ರಾವಣನನ್ನು ಜಯಿಸಿ ತನ್ನನ್ನು ಬಂಧಮುಕ್ತಳನ್ನಾಗಿ ಮಾಡುವನೆಂಬ ನಂಬಿಕೆ. ಆದುದರಿಂದ ಹನುಮಂತನು ರಾಮನ ಬಳಿಗೆ ಕರೆದೊಯ್ಯುವೆನೆಂದು ಹೇಳಿದಾಗ ಪರಪುರು ಷನ ಸ್ಪರ್ಶವನ್ನು ಇಚ್ಛಿಸದೆ ಹೋದಳು. ಕಷ್ಟದಲ್ಲಿರುವಾಗಲೂ ಅವಳು ಆದರ್ಶವನ್ನು ತನ್ನ ಸುಖಕ್ಕಾಗಿ ಎಂದಿಗೂ ಬಲಿಕೊಟ್ಟ ವಳಲ್ಲ.

ರಾಮನು ರಾವಣನನ್ನು ವಧಿಸಿದ ಬಳಿಕ ವಿಭೀಷಣನು ಸೀತೆಯ ಬಳಿ ಸಾರಿ, "ತಾಯಿ, ನಿಮಗೆ ಕಷ್ಟಕೊಟ್ಟ ಈ ರಾಕ್ಷಸಿಯರಿಗೆ ಏನು ಶಿಕ್ಷೆ ವಿಧಿಸಲಿ ?" ಎಂದು ಕೇಳಿದನು. ಸೀತೆ, "ರಾಕ್ಷಸಿಯರು ರಾವಣನ ಆಜ್ಞೆಯಿಂದ ಕ್ರೂರವಾಗಿ ವರ್ತಿಸಿದರೇ ವಿನಾ ಬೇರೆ ಕಾರಣದಿಂದಲ್ಲ. ಅವರಿಗೆ ಶಿಕ್ಷೆ ಬೇಡ" ಎಂದು ಸಮಾಧಾನ ಹೇಳಿದಳು. ಸೀತೆ ಕ್ಷಮೆಯ ಅಧಿಷ್ಠಾತ್ರಿ ದೇವತೆಯಾಗಿ ವಿರಾಜಿಸುತ್ತಾಳೆ.

ಕಷ್ಟ ಕ್ಲೇಷಗಳ ಮಧ್ಯೆ ಬದುಕಿ ಕೃಶಳಾಗಿದ್ದ ಸೀತೆ ರಾಮ ನನ್ನು ಕಾಣುವ ಸಂತೋಷ ಭರದಲ್ಲಿ ಅವನ ಬಳಿಗೆ ಬಂದಾಗ "ನೀನು ಎಲ್ಲಿಗೆ ಬೇಕಾದರೂ ಹೋಗು" ಎಂಬ ಪತಿಯ ಮಾತನ್ನು ಕೇಳಿ ಅವಳ ತಲೆಯ ಮೇಲೆ ಪರ್ವತವೇ ಕುಸಿದು ಬಿದ್ದಂತಾಯಿತು. ಆಗ ಅವಳಿಗೆ ಬೇರೆ ಯಾವ ಮಾರ್ಗವೂ ತೋರದೆ ಪ್ರಾಣತ್ಯಾಗ ಮಾಡಲು ಬಯಸಿ ಮೈದುನ ಲಕ್ಷ್ಮಣ ನಿಗೆ ಚಿತೆಯನ್ನು ಸಿದ್ಧಮಾಡಲು ಹೇಳಿದಳು. ರಾಮನನ್ನು

ಬಿಟ್ಟು ಬದುಕುವುದಕ್ಕಿಂತ ಚಿತೆಯಲ್ಲಿ ದಗ್ಧವಾಗುವುದೆ ಎಲ್ಲ ದುಃಖಗಳಿಗೂ ಸಿದ್ಧೌಷಧವೆಂದು ತಿಳಿದಳು.

"ಚಿತಾಂ ಮೇ ಕುರು ಸೌಮಿತ್ರೇ ವ್ಯಸನಸ್ಯಾಸ್ಯ ಭೇಷಜಮ್ |

ರಾಮನನ್ನು ಬಿಟ್ಟ ಜೀವನ ಅವಳಿಗೆ ಅರ್ಥವಿಲ್ಲದುದು. ನೈತಿಕ ಶಕ್ತಿಯಿಂದಲೂ ದೃಢ ಸಂಕಲ್ಪದಿಂದಲೂ ಸಮನ್ವಿತ ವಾದ ಚೇತನ ಅವಳದು. ಅಗ್ನಿ ಪರೀಕ್ಷೆಯಲ್ಲಿ ಗೆದ್ದು ತನ್ನ ಅತಿಶಯ ಚಾರಿತ್ರ್ಯ ಮಹಿಮೆಯಿಂದ ರಾಮನಿಗೆ ಅತೀವ ಪ್ರಿಯಳಾಗಿ ಅಯೋಧ್ಯೆಯನ್ನು ಸೇರಿ ರಾಮನೊಡನೆ ಪಟ್ಟಾಭಿ ಷಿಕ್ತಳಾದಳು. ಸೌಂದರ್ಯ, ಮಾಧುರ್ಯ, ಸಹನೆ, ಕ್ಷಮಾ ಗುಣ, ವಿವೇಕ, ಧೈರ್ಯ, ಪತಿಭಕ್ತಿ-ಇಂತಹ ಮಹಾಗುಣಗ ಗಳಿಂದ ಶೋಭಿಸುವ ಸೀತೆ ಭಾರತೀಯ ಸಂಸ್ಕೃತಿ ಇರುವ ವರೆಗೂ ಚಿರವಾಗಿರುವ ಆದರ್ಶ ಮಹಿಳೆ.

ಲಕ್ಷ್ಮಣ

ಲಕ್ಷ್ಮಣನು ರಾಮನಿಗೆ ಬಾಲ್ಯದಿಂದಲೂ ಮತ್ತೊಂದು ಪ್ರಾಣದಂತೆ ಇದ್ದವನು. ಜೀವನದ ಉದ್ದಕ್ಕೂ ಅಣ್ಣನನ್ನು ನೆರಳಿನಂತೆ ಅನುಸರಿಸಿದವನು. ವಿಶ್ವಾಮಿತ್ರನೊಡನೆ ರಾಮನು ಹೊರಟರೆ ಆಹ್ವಾನವಿಲ್ಲದೆ ಅಣ್ಣನೊಡನೆ ಹೊರಡುವ ಸ್ನೇಹ ಅವನದು. ವನವಾಸಕ್ಕಾಗಿ ರಾಮನು ಹೊರಟರೆ ತನ್ನ ಸುಖವನ್ನು ತ್ಯಜಿಸಿ ಅವನ ಹಿಂದೆ ಹೊರಡಲು ಲಕ್ಷ್ಮಣನು ಸಿದ್ಧ. ರಾಮನಿಗೆ ವನವಾಸವೆಂಬ ವಿಚಾರವನ್ನು ಕೇಳಿದಾಗ ಲಕ್ಷ್ಮಣನು ಉದ್ವೇಗಗೊಂಡು ತಂದೆಯನ್ನೂ ಅಯೋಧ್ಯೆ ಯನ್ನೂ ನಾಶಮಾಡುವೆನೆಂದು ಗುಡುಗಿದನು. ಆದರೆ

ರಾಮನ ಹಿತವಚನಗಳನ್ನು ಕೇಳಿದೊಡನೆ ಮಂತ್ರಮುಗ್ಧವಾದ ಸರ್ಪ ತನ್ನ ಹೆಡೆಯನ್ನು ಮುಚ್ಚಿಕೊಳ್ಳುವಂತೆ ಶಾಂತ ನಾದನು. ಲಕ್ಷ್ಮಣನಿಗೆ ಕೋಪವು ಬೇಗನೆ ಬರುತ್ತಿತ್ತು, ಹಾಗೆಯೆ ಬಹುಬೇಗನೆ ಶಾಂತವೂ ಆಗುತ್ತಿತ್ತು. ಲಕ್ಷ್ಮಣನಿಗೆ ಇಹಪರಗಳೆರಡರಲ್ಲಿಯೂ ರಾಮನಿಗೆ ಸಮನಾದುದು ಬೇರೆ ಯಾವುದೂ ಇರಲಿಲ್ಲ. ಸುಮಿತ್ರೆಯಂತಹ ಪುಣ್ಯವತಿಯನ್ನು ತಾಯಿಯಾಗಿ ಪಡೆದ ಭಾಗ್ಯಶಾಲಿ ಅವನು. ರಾಮನೊಡನೆ ಲಕ್ಷ್ಮಣನು ಅರಣ್ಯಕ್ಕೆ ಹೋಗುವುದನ್ನು ಕೇಳಿ ಸುಮಿತ್ರೆ ದುಃಖಿಸಲಿಲ್ಲ, ಸಂತೋಷದಿಂದ ಆಶೀರ್ವದಿಸಿದಳು.

ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್ ।
ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾಸುಖಮ್ ॥

"ರಾಮನನ್ನು ದಶರಥನೆಂದು ತಿಳಿ, ಸೀತೆಯನ್ನು ನಾನೆಂದು ತಿಳಿ, ಅಡವಿಯನ್ನು ಅಯೋಧ್ಯೆಯೆಂದು ತಿಳಿ, ಹೋಗು ಅರಣ್ಯದಲ್ಲಿ ಸುಖವಾಗಿರು."

ಹೀಗೆ ಆಶೀರ್ವದಿಸುವ ಸುಮಿತ್ರೆಯನ್ನು ತಾಯಿಯಾಗಿ ಪಡೆದ ಲಕ್ಷ್ಮಣನು ಧನ್ಯಪುರುಷ.

ಅರಣ್ಯವನ್ನು ಪ್ರವೇಶಿಸಿದ ಮೇಲೆ ರಾಮನು ಒಂದು ದಿನ ಲಕ್ಷ್ಮಣನನ್ನು ಅಯೋಧ್ಯೆಗೆ ಹಿಂತಿರುಗಬೇಕೆಂದು ಹೇಳಿದಾಗ ಲಕ್ಷ್ಮಣನು ತನ್ನ ಅಂತರಂಗವನ್ನು ಸ್ಪಷ್ಟವಾಗಿ ಹೇಳಿಬಿಟ್ಟನು.

ನ ಹಿ ತಾತಂ ನ ಶತ್ರುಘ್ನಂ ನ ಸುಮಿತ್ರಾಂ ಪರನ್ತಪ ।
ದ್ರಷ್ಟುಮಿಚ್ಛೇಯಮದ್ಯಾಹಂ ಸ್ವರ್ಗಂಚಾಪಿ ತ್ವಯಾ ವಿನಾ ॥

"ಹೇ ರಾಮ, ನಿನ್ನನ್ನು ಬಿಟ್ಟು ತಂದೆಯನ್ನಾಗಲಿ ಶತ್ರುಘ್ನನನ್ನಾಗಲಿ ಸುಮಿತ್ರೆಯನ್ನಾಗಲಿ ಕೊನೆಗೆ ಸ್ವರ್ಗವನ್ನಾಗಲಿ ನೋಡಲು ಇಚ್ಛಿಸುವುದಿಲ್ಲ."
ಇದು ಲಕ್ಷ್ಮಣನ ನಿರ್ಧಾರ. ರಾಮಲಕ್ಷ್ಮಣರ ಸಂಬಂಧ ಹೂವಿಗೂ ಅದರ ಪರಿಮಳಕ್ಕೂ ಇದ್ದ ಸಂಬಂಧದಂತೆ ಅತಿ ನಿಕಟ.

ಮಾರೀಚನ ಧ್ವನಿಯನ್ನು ರಾಮನದೆಂದೇ ಭಾವಿಸಿದ ಸೀತೆ ಲಕ್ಷ್ಮಣನನ್ನು ರಾಮ ಸಹಾಯಕ್ಕಾಗಿ ಹೋಗಬೇಕೆಂದು ಹಠ ಹಿಡಿದಳು. ಅದು ರಾಕ್ಷಸರ ಮಾಯೆಯೆಂದು ಹಲವು ರೀತಿಯಲ್ಲಿ ಹೇಳಿದರೂ ಸೀತೆ ಕೇಳಲಿಲ್ಲ. "ನೀನು ಭರತನ ಚರ, ಪ್ರಚ್ಛನ್ನ ಜ್ಞಾತಿ ಶತ್ರು, ನನ್ನ ಲೋಭಕ್ಕಾಗಿ ರಾಮನ ಅನುವರ್ತಿ, ರಾಮನಿಗೆ ಏನಾದರು ಅಶುಭವಾದರೆ ನಾನೂ ಅಗ್ನಿ ಪ್ರವೇಶ ಮಾಡುತ್ತೇನೆ" ಎಂದು ಸೀತೆ ಹೇಳಿದಾಗ ಲಕ್ಷ್ಮಣನ ಮನಶ್ಶಾಂತಿ ಕಲಕಿ ಹೋಯಿತು. ನಿರಪರಾಧಿಯಾದ ಅವನಿಗೆ ಕೋಪ ಉಕ್ಕಿತು. "ದೇವಿ, ನೀನು ನನಗೆ ದೇವತಾ ಸ್ವರೂಪಳು. ನಿನಗೆ ನಾನು ಈ ಸಮಯದಲ್ಲಿ ಏನು ಹೇಳುವುದೂ ಉಚಿತವಲ್ಲ. ಸ್ತ್ರೀ ಬುದ್ಧಿ ಸ್ವಭಾವತಃ ಚಂಚಲ. ನೀನು ಹೇಳಿದ ಮಾತು ಕರಗಿಸಿದ ಲೋಹವನ್ನು ಕಿವಿಯಲ್ಲಿ ಸುರಿದಂತಾಯಿತು. ಇದನ್ನು ಸಹಿಸುವುದು ನನ್ನಿಂದ ಅಸಾಧ್ಯ. ನಿನಗೆ ನಿಜವಾಗಿಯೂ ಮೃತ್ಯು ಸನ್ನಿಹಿತವಾಗಿದೆ. ಸುತ್ತ ನಾಲ್ಕು ಕಡೆಯಲ್ಲಿಯೂ ಅಶುಭ ಲಕ್ಷಣಗಳು ಕಾಣುತ್ತಿವೆ"— ಹೀಗೆ ಕ್ರೋಧ ಸ್ಫುರಿತ ವದನನಾಗಿ ಲಕ್ಷ್ಮಣನು ಹೇಳಿದರೂ 'ಸಮಗ್ರ ವನ ದೇವತೆಗಳು ನಿನ್ನನ್ನು ರಕ್ಷಿಸಲಿ' ಎಂದು ಅವಳ ಕ್ಷೇಮಕ್ಕಾಗಿ ಪ್ರಾರ್ಥಿಸಿ, ಅವಳಿಗೆ ನಮಿಸಿ ರಾಮನನ್ನು

ಅರಸುತ್ತ ಹೊರಟನು. ಒಂದು ಕಡೆ ಪತಿಗಾಗಿ ಸೀತೆಯ ಉದ್ವೇಗ, ಮತ್ತೊಂದು ಕಡೆ ಲಕ್ಷ್ಮಣನ ಕಪಟವಿಲ್ಲದ ಶುಭ್ರ ಹೃದಯ– ಇವೆರಡನ್ನೂ ಕವಿ ಚಿತ್ರಿಸಿರುವುದನ್ನು ಕಾಣುತ್ತೇವೆ.

ಸೀತೆಯನ್ನು ಅರಸುತ್ತ ರಾಮ ಲಕ್ಷ್ಮಣರು ಸಂಚರಿಸುತ್ತಿದ್ದಾಗ ಋಷ್ಯಮೂಕ ಪರ್ವತದಲ್ಲಿ ಸಿಕ್ಕಿದ ಆಭರಣಗಳನ್ನು ಸುಗ್ರೀವನು ರಾಮನಿಗೆ ತೋರಿಸಿದನು. ಅವುಗಳನ್ನು ನೋಡಿ ಲಕ್ಷ್ಮಣನು ಹೀಗೆ ಹೇಳಿದನು.

ನಾಹಂ ಜಾನಾಮಿ ಕೇಯೂರೇ ನಾಹಂ ಜಾನಾಮಿ ಕುಣ್ಡಲೇ |
ನೂಪುರೇ ತ್ವಭಿಜಾನಾಮಿ ನಿತ್ಯಂ ಪಾದಾಭಿವಂದನಾತ್ ||

"ಕೇಯೂರವನ್ನು ನಾನು ನೋಡಿಲ್ಲ, ಕುಂಡಲವನ್ನು ನಾನು ಕಂಡಿಲ್ಲ, ದಿನವೂ ನಮಿಸುವಾಗ ಸೀತೆಯ ನೂಪುರಗಳನ್ನು ಮಾತ್ರ ನೋಡಿದ್ದೇನೆ." ಲಕ್ಷ್ಮಣನು ಧರ್ಮದ ಪರಮ ಶ್ರೇಷ್ಠತೆಯನ್ನು ತಿಳಿದವನು ಮಾತ್ರವಲ್ಲ. ಅದನ್ನು ಆಚರಿಸಿದವನೂ ಹೌದು. ಸೀತೆ ಅತ್ತಿಗೆಯಾದರೂ ಆಕೆಯ ದೇಹ ಸೌಂದರ್ಯವನ್ನು ಕಂಡವನಲ್ಲ. ಅವನ ಭಕ್ತಿ ಆಕೆಯ ಪಾದಗಳಲ್ಲಿ ನೆಲಸಿತ್ತು. ಶುದ್ಧ ಚೇತನನಾದ ಲಕ್ಷ್ಮಣನು ತನ್ನ ಚಾರಿತ್ರ್ಯ ಶುದ್ಧಿಯನ್ನು ಎಲ್ಲ ರೀತಿಯಿಂದಲೂ ರಕ್ಷಿಸಿಕೊಂಡಿದ್ದನು. ಮನಸ್ಸಿನ ಚಾಂಚಲ್ಯಕ್ಕೆ ಸ್ವಲ್ಪವೂ ಅವಕಾಶ ಕೊಟ್ಟಿರಲಿಲ್ಲ.

ರಾಮನಿಗೆ ಲಕ್ಷ್ಮಣನಲ್ಲಿ ಅತಿಶಯವಾದ ಪ್ರೀತಿ ಇತ್ತು. ರಾವಣನ ಶಕ್ತ್ಯಾಯುಧದಿಂದ ಮೂರ್ಛಿತನಾದ ತಮ್ಮನನ್ನು ಕಂಡು ಮಮ್ಮಲ ಮರುಗಿದನು.

ದೇಶೇ ದೇಶೇ ಕಲತ್ರಾಣಿ ದೇಶೆ ದೇಶೇ ಚ ಬಾಂಧವಾಃ ।
ತಂ ತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ ॥

"ದೇಶ ದೇಶಗಳಲ್ಲಿ ಸೂಕ್ತ ವಧುವನ್ನು ಪಡೆಯಬಹುದು, ದೇಶ ದೇಶಗಳಲ್ಲಿ ಬಂಧುಗಳನ್ನು ಪಡೆಯಬಹುದು ; ಆದರೆ ಜಗತ್ತಿನಲ್ಲಿ ಎಲ್ಲಿಯೂ ಲಕ್ಷ್ಮಣನಂತಹ ಸಹೋದರನನ್ನು ಕಾಣಲಾರೆ." ಹೀಗೆ ಪರಿತಪಿಸುವ ರಾಮನ ಮಾತುಗಳಲ್ಲಿ ಲಕ್ಷ್ಮಣನ ವ್ಯಕ್ತಿತ್ವ ಚೆನ್ನಾಗಿ ಪ್ರಕಟವಾಗುತ್ತದೆ.

ರಾಮನೊಡನೆ ಅವನ ಸುಖ ಕಷ್ಟಗಳಲ್ಲಿ ಸಹಭಾಗಿಯಾಗಿ ಕಾಯಾ ವಾಚಾ ಮನಸಾ ಅವನನ್ನು ಅನುಸರಿಸಿ ಬಾಳಿದ ಲಕ್ಷ್ಮಣನಂತಹ ಪಾತ್ರವನ್ನು ಮತ್ತೆಲ್ಲಿಯೂ ಕಾಣುವುದು ದುರ್ಲಭ. ಅವನಿಗೆ ಅಣ್ಣನಲ್ಲಿ ಅಸೀಮ ಪ್ರೀತಿಯೂ ಆತ್ಮೋತ್ಸರ್ಗದಲ್ಲಿ ಅತುಲ ಧೈರ್ಯವೂ ನೆಲೆಸಿತ್ತು. ಇಂತಹ ಕ್ಷಾತ್ರ ತೇಜದ ಜ್ವಲಂತ ಮೂರ್ತಿಯೂ ಮೌನ ಭ್ರಾತೃ ಭಕ್ತಿಯ ಆದರ್ಶ ಮೂರ್ತಿಯೂ ಆದ ಲಕ್ಷ್ಮಣನು ಭರತಖಂಡದಲ್ಲಿ ಚಿರದಿನವೂ ಗೌರವಿಸಲ್ಪಡುವ ಮಹಾಪುರುಷನಾಗಿದ್ದಾನೆ.

ಭರತ

ರಾಮನ ಯೌವರಾಜ್ಯಾಭಿಷೇಕವು ನಡೆಯಲೆಂದಿರುವಾಗ ಭರತನು ಮಾವನ ಮನೆಯಲ್ಲಿದ್ದನು. ಅವನು ಅಯೋಧ್ಯೆಯಲ್ಲಿದ್ದಿದ್ದರೆ ರಾಮನನ್ನು ವನವಾಸಕ್ಕೆ ಹೋಗಲು ಎಂದಿಗೂ ಬಿಡುತ್ತಿರಲಿಲ್ಲವೆಂದು ತೋರುತ್ತದೆ. ರಾಮನಲ್ಲಿ ಭರತನಿಗೂ ಅತಿಶಯವಾದ ಭಕ್ತಿ. ದುಃಸ್ವಪ್ನವನ್ನು ಕಂಡೊಡನೆ ಮಾವನ ಮನೆಯಿಂದ ಭರತನು ಅಯೋಧ್ಯೆಗೆ ಬಂದನು. ಅಯೋಧ್ಯೆ

ಯಲ್ಲಿ ಸಂತೋಷವಾಗಲಿ ಪ್ರಸನ್ನತೆಯಾಗಲಿ ಕಾಣದಿದ್ದುದ ರಿಂದ ಅವನಿಗೆ ಆಶ್ಚರ್ಯವಾಯಿತು. ತಾಯಿಯನ್ನು ಕಂಡಾಗ ತಂದೆಯ ಮರಣ ವಿಚಾರ ತಿಳಿಯಿತು. ಕೈಕೇಯಿ ದಶರಥನ ಮರಣಕ್ಕಾಗಿ ಹೆಚ್ಚು ದುಃಖಿಸಲಿಲ್ಲ.

"ಯಾ ಗತಿಃ ಸರ್ವಭೂತಾನಾಂ ತಾಂ ಗತಿಂ ತೇ ಪಿತಾ ಗತಃ" |

"ಎಲ್ಲ ಭೂತಗಳೂ ಕೊನೆಗೆಲ್ಲಿ ಹೋಗಿ ಸೇರುವುವೊ ಆ ಗತಿಯನ್ನೆ ನಿನ್ನ ತಂದೆ ಸೇರಿದನು" ಈ ರೀತಿಯಾಗಿ ಶಾಂತ ವಾಗಿ ಉತ್ತರ ಹೇಳಿದ ತಾಯಿಯನ್ನು ಕಂಡು ಭರತನಿಗೆ ದುಃಖವಾಯಿತು. ಅನಂತರ ಅವನ ಪ್ರಶ್ನೆಗಳಿಗೆ ಪ್ರಾರಂಭ ವಾಯಿತು.

"ರಾಮನೆಲ್ಲಿ ?"

"ರಾಮನು ಅರಣ್ಯಕ್ಕೆ ಹೋದನು."

"ರಾಮನು ಅರಣ್ಯಕ್ಕೆ ಹೋಗಲು ಪರರ ಧನವನ್ನು ಅಪ ಹರಿಸಿದನೊ ? ದರಿದ್ರರನ್ನು ಪೀಡಿಸಿದನೊ ? ಪರಪತ್ನಿಯಲ್ಲಿ ಅನುರಕ್ತನಾದನೊ ? ಅರಣ್ಯಕ್ಕೆ ಅವನು ಏತಕ್ಕಾಗಿ ಹೋದುದು ?"

ಕೈಕೇಯಿಗೆ ಏನು ಮಾತನಾಡಲೂ ತೋರದೆ ಅಂತಹ ಕೃತ್ಯಗಳಾವುದನ್ನೂ ರಾಮನು ಆಚರಿಸಲಿಲ್ಲವೆಂದು ಹೇಳಿ ಭರತನು ಸುಖವಾಗಿ ರಾಜ್ಯಭಾರಮಾಡಬೇಕೆಂದಳು.

ತಾಯಿಯ ಮಾತುಗಳನ್ನು ಕೇಳಿ ಭರತನ ಮನಸ್ಸು ಅಸ್ವಸ್ಥವಾಯಿತು. ತಾಯಿಯನ್ನು ಕುರಿತು, "ನೀನು ಅಶ್ವ ಪತಿಯ ಮಗಳಲ್ಲ, ರಾಕ್ಷಸಿ. ಧರ್ಮವತ್ಸಲನಾದ ತಂದೆಯ ಮರಣಕ್ಕೆ ಕಾರಣಳಾದೆ. ಅಣ್ಣನನ್ನು ಭಿಕಾರಿಯಾಗಿ

ಮಾಡಿದೆ. ನೀನು ನರಕಕ್ಕೆ ಹೋಗುವೆ." ಎಂದು ಹೇಳಿದನು.

ಆ ಸಮಯಕ್ಕೆ ಸುಮಿತ್ರೆಯೊಡನೆ ಕೌಸಲ್ಯೆಯೂ ಬಂದು ಭರತನನ್ನು ಕಂಡು "ನಿನ್ನ ತಾಯಿ ನಿನಗೆ ರಾಜ್ಯವನ್ನು ನಿಷ್ಕಂಟಕವಾಗಿ ಮಾಡಿದ್ದಾಳೆ; ನನ್ನನ್ನು ಅರಣ್ಯಕ್ಕೆ ಕಳು ಹಿಸಿಬಿಡು" ಎಂದು ಹೇಳಿದಳು. ಈ ಮಾತುಗಳನ್ನು ಕೇಳಿ ಭರತನಿಗೆ ಅತಿ ದುಃಖವಾಯಿತು. ತಾನು ನಿರಪರಾಧಿಯೆಂದು ಕೌಸಲ್ಯೆಯ ಕ್ಷಮೆ ಬೇಡಿದನು. ಭರತನ ಹೃದಯದ ವ್ಯಾಕುಲವನ್ನು ಕಂಡು ಕೌಸಲ್ಯೆ ಶಾಂತವಾದಳು. ಆ ರಾತ್ರಿ ಭರತನಿಗೆ ನಿದ್ದೆ ಬರಲಿಲ್ಲ. ಕಂಬನಿ ಸುರಿಸುತ್ತ ಬೆಂಕಿಯ ಮೇಲೆ ಹೊರಳಾಡುವಂತೆ ಹಾಸಿಗೆಯ ಮೇಲೆ ಹೊರ ಳಾಡಿದನು.

ರಾಮನನ್ನು ಅಯೋಧ್ಯೆಗೆ ಕರೆತಂದು ಪಟ್ಟಾಭಿಷಿಕ್ತ ನನ್ನಾಗಿ ಮಾಡುವುದೆ ಭರತನ ಉದ್ದೇಶವಾಗಿತ್ತು. ಅರಣ್ಯ ದಲ್ಲಿ ರಾಮನನ್ನು ಕಂಡು ಅಯೋಧ್ಯೆಗೆ ಬರಬೇಕೆಂದು ಹೇಳುತ್ತ ಹಠ ಹಿಡಿದನು. ಲಕ್ಷ್ಮಣನು ಕೋಪಬಂದರೂ ರಾಮನ ಮಾತುಗಳನ್ನು ಕೇಳಿದೊಡನೆ ಶಾಂತನಾಗುತ್ತಿದ್ದನು. ಆದರೆ ಭರತನು ತನಗೆ ಸರಿಯೆಂದು ಕಂಡುದರ ವಿಚಾರವಾಗಿ ರಾಮನೊಡನೆಯೂ ವಾದಿಸದೆ ಬಿಡುತ್ತಿರಲಿಲ್ಲ. ರಾಮನನ್ನು ಕುರಿತು, "ಕೈಕೇಯಿಯೆ ತಂದೆಯ ಮನಸ್ಸನ್ನು ಕೆಡಿಸಿದ್ದು. ಅವಳು ತನಗೂ ಅಪಕೀರ್ತಿಯನ್ನು ತಂದುಕೊಂಡದ್ದಲ್ಲದೆ ಮಹಾಪಾಪವನ್ನೂ ಮಾಡಿದ್ದಾಳೆ. ನಮ್ಮ ಕುಟುಂಬದ ಸರ್ವ ನಾಶಕ್ಕೂ ಕಾರಣಳಾದಳು. ಈ ಕಾರಣದಿಂದ ಅವಳು ದಂಡನೆಗೆ ಅರ್ಹಳು" ಎಂದು ತಾಯಿಯ ದುಷ್ಟವರ್ತನೆಯನ್ನು

ಖಂಡಿಸಿ ಮಾತನಾಡಿದ ಭರತನನ್ನು ಸಮಾಧಾನಮಾಡುವುದು ರಾಮನಿಗೆ ಅತಿಕಷ್ಟವಾಯಿತು.

ಕೃಶನೂ ಶೋಕಾಕ್ರಾಂತನೂ ಆಗಿದ್ದ ಭರತನು ರಾಮನ ಪಾದಾರವಿಂದಗಳನ್ನು ಹಿಡಿದುಕೊಂಡು, "ವಿಶ್ವದ ಆರಾಧನಾ ಮೂರ್ತಿಯಾದ ನೀನು ಹೀಗೆ ಭಿಕಾರಿಯಾಗುವುದೆ?" ಎಂದು ಹೇಳಿ ಕಣ್ಣೀರಿನ ಕಾಲುವೆಯನ್ನು ಹರಿಸುತ್ತ ಅವನ ಪಾದಗಳ ಮೇಲೆ ಬಿದ್ದು ಹೊರಳಾಡಿದನು. ಇಬ್ಬರು ತ್ಯಾಗಿಗಳ ಈ ದೃಷ್ಯವಂತೂ ಅತ್ಯಂತ ಕರುಣಾಪೂರ್ಣ. "ನಾನು ನಿನ್ನ ಶಿಷ್ಯ, ದಾಸಾನುದಾಸ, ಪ್ರಸನ್ನನಾಗು, ರಾಜ್ಯಕೆ ಹಿಂತಿರುಗು ಅಭಿಷಕ್ತನಾಗು" ಎಂದು ಪರಿಪರಿಯಾಗಿ ಪ್ರಾರ್ಥಿಸಿದನು ಭರತ. ರಾಮನು ಎಷ್ಟು ರೀತಿಯಲ್ಲಿ ಸಮಾಧಾನ ಹೇಳಿದರೂ ಭರತನು ರಾಮನನ್ನು ಬಿಟ್ಟು ಹೋಗಲು ಒಪ್ಪಲಿಲ್ಲ. ಕೊನೆಗೆ ರಾಮನ ಪಾದುಕೆಗಳನ್ನು ಹೊತ್ತು ನಂದೀಗ್ರಾಮದಲ್ಲಿ ರಾಮನ ಪಾದುಕೆಗಳ ಪ್ರತಿನಿಧಿಯಾಗಿ ನಿಂತು ರಾಜ್ಯದ ಕಾರ್ಯಭಾರವೆಲ್ಲವನ್ನೂ ನೆರವೇರಿಸುತ್ತ ರಾಮಾಗಮನವನ್ನು ನಿರೀಕ್ಷಿಸುತ್ತ ತಪಸ್ವಿಯಾಗಿ ನಿಂತನು. ಈ ಶೀಲದ ಔನ್ನತ್ಯ ಅವನ ನಿಷ್ಕಲ್ಮಷ ಹೃದಯವನ್ನು ತೋರುತ್ತದೆ. ಕೈಕೇಯಿಯ ದೋಷಗಳೆಲ್ಲ ಭರತನ ಅದ್ವಿತೀಯ ತ್ಯಾಗ ತಪಸ್ಸುಗಳ ಮುಂದೆ ಕಣ್ಮರೆಯಾಗಿ ಹೋಗುತ್ತವೆ. ನಿಷಾದಾಧಿಪತಿ ಗುಹನು ಭರತನನ್ನು ಶ್ಲಾಘಿಸಿದ ರೀತಿ ಮನೋಜ್ಞವಾದುದು:

ಧನ್ಯಸ್ತ್ವಂ ನ ತ್ವಯಾ ತುಲ್ಯಂ ಪಶ್ಯಾಮಿ ಜಗತೀತಲೇ ।
ಅಯತ್ನಾದಾಗತಂ ರಾಜ್ಯಂ ಯಸ್ತ್ವಂ ತ್ಯಕ್ತುಮಿಹೇಚ್ಛಸಿ ॥

"ಯತ್ನವಿಲ್ಲದೆ ಬಂದ ರಾಜ್ಯವನ್ನು ತ್ಯಜಿಸುತ್ತಿರುವ ನೀನು ಧನ್ಯ. ನಿನ್ನಂತಹವನನ್ನು ಜಗತ್ತಿನಲ್ಲಿ ಬೇರೆ ಯಾರನ್ನೂ ಕಾಣೆ."

ಇಂತಹ ಉದಾತ್ತತೆ ಭರತನದು. ಭರತನು ಭ್ರಾತೃ ಪ್ರೇಮದಲ್ಲಿ ಲಕ್ಷ್ಮಣನಿಗೆ ಸಮನಾದವನು. ಮಲ್ಲಿಗೆಯ ಸ್ವಚ್ಛ ನಿರ್ಮಲ ಪರಿಮಳದಂತೆ ಭರತನ ಪಾತ್ರ ರಾಮಾಯಣ ವನ್ನು ತುಂಬುತ್ತದೆ.

ಹನುಮಂತ

ಹನುಮಂತನ ಶ್ರದ್ಧಾಯುತ ಸೇವೆಯನ್ನು ಭಾರತದ ಜನರು ತುಂಬ ಗೌರವಿಸಿದ್ದಾರೆ. ಹನುಮಂತನ ಸ್ವಚ್ಛವಾದ ಮಾತು ರಾಮನಿಗೆ ಸಂತೋಷವನ್ನುಂಟುಮಾಡಿತು. ಅವನ ಹೃದಯ ದಂತೆ ಅವನ ಮಾತು! ಯಾವ ವ್ಯವಹಾರದಲ್ಲಿಯೂ ಹನು ಮಂತನು ಅಪಶಬ್ದವನ್ನು ಉಪಯೋಗಿಸಿದಂತೆ ಕಾಣುವುದಿಲ್ಲ.

ಹನುಮಂತನಿಗೆ ತನ್ನ ಗುರುತಿನ ಉಂಗುರವನ್ನು ಸೀತೆಗೆ ಕೊಡಬೇಕೆಂದು ಹೇಳಿ ಕಳುಹಿಸುವಾಗ ರಾಮನು ಅವನನ್ನು ಸತ್ವಶಾಲಿ, ವಿಕ್ರಮ, ವೀರ ಎಂದು ಪ್ರಶಂಸಿಸಿದನು. ಲಂಕೆ ಯಿಂದ ಸೀತೆ ಕೊಟ್ಟ ಚೂಡಾಮಣಿಯನ್ನು ತಂದು ರಾಮನಿಗೆ ಒಪ್ಪಿಸಿದಾಗ ರಾಮನಿಗೆ ಅತಿಶಯವಾದ ಸಂತೋಷವಾಯಿತು. ಅರಣ್ಯವಾಸಿಯಾದ ರಾಮನು ಬೇರೆ ಯಾವುದನ್ನೂ ಕೊಡ ಲಾರದೆ ತನ್ನ ಹೃದಯ ಪ್ರೀತಿಯಾಗಿ ಅವನನ್ನು ಆಲಂಗಿಸಿ ದನು. ಭಕ್ತನಾದ ಭೃತ್ಯನಿಗೆ ಇದಕ್ಕಿಂತ ಹೆಚ್ಚಿನ ಗೌರವ ಬೇರೆ ಏನು ತಾನೆ ಇದ್ದೀತು!

ಹನುಮಂತನ ಬ್ರಹ್ಮಚರ್ಯದ ಆದರ್ಶ ಹಿರಿದಾದುದು.

ಸೀತೆಯನ್ನು ಅರಸುತ್ತ ರಾವಣನ ಅರಮನೆಯನ್ನು ಹೊಕ್ಕು ಅಲ್ಲಿ ಹುಡುಕುತ್ತಿದ್ದಾಗ ಅಸ್ತವ್ಯಸ್ತವಾಗಿ ಮಲಗಿದ್ದ ಮಹಿಳೆಯರನ್ನು ನೋಡಿ, "ಅಯ್ಯೊ, ನನ್ನ ಧರ್ಮಲೋಪವಾಯಿತು" ಎಂದು ಕೊಂಡನು. ಅವನ ಮನಸ್ಸು ಕ್ಷಣಕಾಲ ಚಂಚಲವಾದರೂ ಚೇತರಿಸಿಕೊಂಡು, "ನನ್ನ ಮನಸ್ಸು ಕಲುಷಿತವಾಗಲಾರದು, ನನ್ನ ಮನಸ್ಸು ನನ್ನ ಸ್ವಾಧೀನದಲ್ಲಿದೆ. ನಾನು ಬಂದಿರುವ ಕಾರ್ಯ ಸೀತಾನ್ವೇಷಣೆಗಾಗಿ" ಎಂದು ಹೇಳಿ ಸಂಯಮಶಾಲಿಯಾದ ಅವನು ಮುಂದಕ್ಕೆ ಹೋದನು. ಅವನ ಮನೋನಿಗ್ರಹ ಈ ಸಂದರ್ಭದಲ್ಲಿ ಚೆನ್ನಾಗಿ ಪ್ರಕಟವಾಗಿದೆ.

ಸೀತೆಗಾಗಿ ಹುಡುಕಿ ಹುಡುಕಿ ಕೊನೆಗೆ ನಿರಾಶೆಯಾಗಿ ಚಿತೆಯನ್ನಾದರೂ ಪ್ರವೇಶಿಸಿ ಸಾಯುವಷ್ಟು ವ್ಯಾಕುಲವಾದರೂ ಧೈರ್ಯ ತಂದುಕೊಂಡು ಸೀತೆಯನ್ನು ಹುಡುಕುತ್ತ ಮುಂದೆ ಸಾಗಿದನು. ಅಶೋಕವನದ ಶಿಂಶುಪ ವೃಕ್ಷದ ಕೆಳಗಡೆ ದುಃಖದಿಂದ ಮಲಿನಳಾದರೂ ತುಂಬಿದ ಗಂಗೆಯಂತೆ ಗಂಭೀರಳಾದ ಸೀತೆಯನ್ನು ಕಂಡಾಗ ಅವನಿಗೆ ಸಂತೋಷವಾಯಿತು. ಅವಳ ಸೌಮ್ಯವಾದ ಆಕಾರವನ್ನು ಕಂಡು ರಾಮನಿಗೆ ತಕ್ಕ ಪತ್ನಿ ಎನಿಸಿತು. ಇಂತಹ ಧರ್ಮಪತ್ನಿಗಾಗಿ ರಾಮನ ಶೋಕವೂ ಕಡಿಮೆ ಎಂದೆನಿಸಿತು.

ದುಷ್ಕರಂ ಕೃತವಾನ್ ರಾಮೋ ಹೀನೋ ಯದನಯಾ ಪ್ರಭುಃ ।
ಧಾರಯತ್ಯಾತ್ಮನೋ ದೇಹಂ ನ ಶೋಕೇನಾವಸೀದತಿ ॥

"ಪ್ರಭುವಾದ ರಾಮನು ಸೀತೆಯನ್ನು ಬಿಟ್ಟು ಶೋಕದಿಂದ ಶರೀರವನ್ನು ಧರಿಸಿರುವ ಅಸಾಧಾರಣವಾದ ಕಾರ್ಯವನ್ನು ಮಾಡಿದ್ದಾನೆ." ಸೀತೆಯಂತಹ ಸಾಧ್ವಿಯನ್ನಗಲಿ ರಾಮನು

ಬದುಕಿರುವುದು ಹನುಮಂತನಿಗೆ ಆಶ್ಚರ್ಯವಾಗಿ ಕಂಡಿತು. ಈ ಮಾತುಗಳನ್ನು ಹನುಮಂತನಿಂದ ಹೇಳಿಸಿ ವಾಲ್ಮೀಕಿ ಸೀತೆಯ ಮಹತ್ವವನ್ನು ಸಾರಿದ್ದಾನೆ. ಹನುಮಂತನ ಸರಳ ಸ್ವಭಾವವನ್ನೂ ನಿರ್ಮಲವಾದ ನುಡಿಗಳನ್ನೂ ಕೇಳಿ ಸೀತೆಗೆ ಅವನಲ್ಲಿ ನಂಬಿಕೆ ಮೂಡಿತು. ಔಚಿತ್ಯವನ್ನು ಮೀರಿ ಮಾತ ನಾಡದ ಹನುಮಂತನಿಗೆ, ರಾಮನಲ್ಲಿದ್ದ ತನ್ನ ಅಪಾರ ಪ್ರೇಮ ಭಕ್ತಿಗಳನ್ನು ಹೇಳಿಕೊಂಡಳು ಸೀತೆ. ಸೀತೆಯ ಕಷ್ಟವನ್ನು ಕಂಡು ತನ್ನ ಬೆನ್ನ ಮೇಲೆ ಹೊತ್ತು ರಾಮನ ಬಳಿಗೆ ಕರೆದೊಯ್ಯುವುದಾಗಿ ಹೇಳಿದನು. ಇದು ಹನುಮಂತನ ಅಸಭ್ಯ ವರ್ತನೆಯನ್ನು ತೋರುವ ನುಡಿಯಲ್ಲ ; ಸೀತೆಯ ಕಷ್ಟದಲ್ಲಿ ಅವನಿಗಿದ್ದ ಅನುಕಂಪದ ಮಾತುಗಳು.

ಸೀತೆಯನ್ನು ಸಂದರ್ಶಿಸಿ ಹನುಮಂತನು ಲಂಕೆಯಿಂದ ಹಿಂತಿರುಗಿದಾಗ ಕಪಿಗಳೆಲ್ಲರೂ ಜಯಶಾಲಿಯಾದ ಅವನನ್ನು ಕಂಡು ಹರ್ಷೋದ್ಗಾರ ಮಾಡಿದರು.

ಗಾಯನ್ತಿ ಕೇಚಿತ್ ಪ್ರಹಸನ್ತಿ ಕೇಚಿತ್ ।
ನೃತ್ಯಂತಿ ಕೇಚಿತ್ ಪ್ರಣಮನ್ತಿ ಕೇಚಿತ್ ॥

"ಅವನನ್ನು ಕಂಡು ಸ್ತುತಿಸುವವರು ಕೆಲವರು. ಹರ್ಷ ಧ್ವನಿ ಮಾಡುವವರು ಕೆಲವರು. ಕುಣಿಯುವವರು ಕೆಲವರು. ನಮಸ್ಕಾರ ಮಾಡುವವರು ಕೆಲವರು."

ರಾವಣನನ್ನು ಜಯಿಸುವುದರಲ್ಲಿ ರಾಮನ ಅನುಯಾಯಿಯಾಗಿ ಪ್ರಾಮಾಣಿಕತೆಯಿಂದ ಸೇವೆಯನ್ನು ಸಲ್ಲಿಸಿದ ಯಶಸ್ಸು ಹನುಮಂತನದು. ರಾವಣನನ್ನು ಸಂಹರಿಸಿದ ಮೇಲೆ ಆ

ವಿಚಾರವನ್ನು ಸೀತೆಗೆ ತಿಳಿಸಿದವನು ಅವನು. ಆಗ ಸೀತೆ ಅವನಿಗೇನಾದರೂ ಬಹುಮಾನ ಕೊಡಲು ಇಚ್ಛಿಸಿದಳು. ಅವಳ ಬಳಿ ಏನೂ ಇರಲಿಲ್ಲ. ಅಯೋಧ್ಯೆಯನ್ನು ಸೇರಿ ಪಟ್ಟಾಭಿಷಿಕ್ತನಾದ ರಾಮನು ಸೀತೆಗೆ ಅಮೂಲ್ಯವಾದ ಹಾರವನ್ನು ಕೊಟ್ಟನು. ಸೀತೆ ಅದನ್ನು ಧರಿಸಿ ವಾನರ ಗೋಷ್ಠಿಯಲ್ಲಿದ್ದ ಹನುಮಂತನ ಕಡೆಗೆ ನೋಡಿ ರಾಮನ ಇಂಗಿತವನ್ನರಿಯಲು ಅವನನ್ನು ನೋಡಿದಳು. ಅವಳ ಮನಸ್ಸನ್ನು ಅರಿತು ರಾಮನು ಅವಳಿಗೆ ಇಷ್ಟ ಬಂದವರಿಗೆ ಆ ಹಾರವನ್ನು ಕೊಡಬಹುದೆಂದನು. ದಕ್ಷನಾಗಿ, ಸಮರ್ಥನಾಗಿ, ಧರ್ಮಿಷ್ಠನಾಗಿ ರಾಮಸೇವೆಯನ್ನು ಮಾಡಿದ ಹನುಮಂತನಿಗೆ ಆ ಅಮೂಲ್ಯ ಹಾರವನ್ನು ಬಹುಮಾನವಾಗಿ ಕೊಟ್ಟಳು. ನಿಷ್ಠಾವಂತನಾದ ಹನುಮಂತನಿಗೆ ಇದಕ್ಕಿಂತ ಹೆಚ್ಚಿನ ಬಹುಮಾನ ಬೇರೆ ಏನಿದ್ದೀತು !

ಹನುಮಂತನು ಯಾವ ವಿಪತ್ತನ್ನಾದರೂ ದಾಟಿ ಹೋಗುವ ಮಹಾವೀರ. ಆದುದರಿಂದಲೇ ಅವನನ್ನು ವಿಪತ್‌ಭಂಜನನೆಂದು ಸ್ತುತಿಸುವರು. ಧೈರ್ಯ, ತೇಜಸ್ಸು, ನೈತಿಕಶಕ್ತಿ ಸರಳತೆ, ವಿನಯ, ಪೌರುಷ, ಸ್ವಾಮಿನಿಷ್ಠೆ–ಇವೆಲ್ಲವೂ ಹನುಮಂತನಲ್ಲಿ ಮಿಳಿತವಾಗಿದ್ದುವು. ಸುಗ್ರೀವ ವಿಭೀಷಣರಿಗೆ ರಾಮನಲ್ಲಿದ್ದ ಮೈತ್ರಿಯಲ್ಲಿ ಸ್ವಾರ್ಥದ ರೇಖೆ ಇರುವಂತೆ ಕಂಡರೂ ಹನುಮಂತನ ಸ್ನೇಹ ಮಾತ್ರ ಭಕ್ತಿಯುತ ಹಾಗೂ ಸಂಪೂರ್ಣ ಅಹೇತುಕ. ಆದುದರಿಂದಲೇ ಭಾರತದಲ್ಲಿ ಹಳ್ಳಿ ಹಳ್ಳಿಯಲ್ಲಿಯೂ ಆಂಜನೇಯನನ್ನು ಆರಾಧಿಸುತ್ತಿರುವರು. ಆಂಜನೇಯನ ಸೇವೆಯು ಆದರ್ಶ ಜಗತ್ತಿಗೆ ಮಾರ್ಗದರ್ಶನ ಮಾಡುವಂತಹುದು.

ರಾವಣ

ರಾವಣನಿಗೆ ಸೀತೆಯ ಸೌಂದರ್ಯದ ವಿಚಾರವಾಗಿ ತಿಳಿದುದು ತಂಗಿ ಶೂರ್ಪನಖಿಯಿಂದ. ರಾವಣನ ಸ್ವಭಾವದಲ್ಲಿ ವಿಷಯ ಲೋಲುಪತೆ ಸೇರಿದುದರಿಂದ ಪರಪತ್ನಿಯಾದ ಸೀತೆಯನ್ನು ಅಪಹರಿಸಲು ಮನಸ್ಸು ಮಾಡಿದನು. ಈ ಉದ್ಯೋಗದಲ್ಲಿ ತನಗೆ ಸಹಾಯ ಮಾಡಬೇಕೆಂದು ಮಾರೀಚನನ್ನು ಕೇಳಿದನು. ಮಾರೀಚನು ಹಿಂದೆಯೆ ರಾಮನಿಂದ ಏಟು ತಿಂದವನಾದುದರಿಂದ ಅವನಲ್ಲಿ ಭೀತಿಯೂ ಅದರೊಡನೆ ಗೌರವವೂ ಮೂಡಿತ್ತು.

"ರಾಮೋ ವಿಗ್ರಹವಾನ್ ಧರ್ಮಃ ಸಾಧುಃ ಸತ್ಯಪರಾಕ್ರಮಃ ।"

"ರಾಮನು ಶರೀರ ತಳೆದ ಧರ್ಮದಂತಿರುವವನು. ಅವನು ಸತ್ಪುರುಷ, ಸತ್ಯವಂತ, ಪರಾಕ್ರಮಿ."

ಮಾರೀಚನ ಈ ಮಾತುಗಳನ್ನು ಕೇಳಿ ರಾವಣನ ಮನಸ್ಸು ಆಗ್ರಹಗೊಂಡಿತು. ರಾವಣನ ಕೋಪವನ್ನು ಕಂಡು ಅವನಿಂದ ಹತನಾಗುವುದಕ್ಕಿಂತ ರಾಮನಿಂದಲೆ ಹತನಾಗುವುದು ಉತ್ತಮವೆಂದು ಮನಸ್ಸು ಮಾಡಿದನು. ಮಾಯಾಮೃಗವಾಗಿ ರಾಮನ ಪರ್ಣಕುಟಿಯ ಬಳಿ ಸಂಚರಿಸಿ ಸೀತೆಯ ಮನಸ್ಸನ್ನು ಆಕರ್ಷಿಸಿ ರಾಮನನ್ನು ಅರಣ್ಯದೊಳಕ್ಕೆ ಕರೆದೊಯ್ದನು. ರಾಕ್ಷಸ ಮೋಸವನ್ನರಿಯದ ಸೀತೆ ಪತಿಯ ಹಿತಕ್ಕಾಗಿ ಲಕ್ಷ್ಮಣನನ್ನು ಕಳುಹಿಸಿದಳು. ಇದೇ ಸಮಯದಲ್ಲಿ ಯತಿ ವೇಷಧಾರಿಯಾದ ರಾವಣನು ಕಳ್ಳನಂತೆ ಸೀತೆಯನ್ನು ಅಪಹರಿಸಿದ್ದು. ಚೋರಬುದ್ಧಿಯೆ ರಾವಣತ್ವದ ಲಕ್ಷಣ.

ಜಟಾಯು ಹೇಳಿದ ಬುದ್ಧಿವಾದವನ್ನು ಕೇಳದೆ ಅದರ ರೆಕ್ಕೆಯನ್ನು ಕತ್ತರಿಸಿ ಸೀತೆಯನ್ನು ಬಲಾತ್ಕಾರವಾಗಿ ಲಂಕೆಗೆ ಎಳೆದೊಯ್ದನು. ಅಬಲೆಯಾದ ಸೀತೆ ಏನುತಾನೆ ಮಾಡುವಂತಿದೆ. ಪತಿಯನ್ನು ನೆನೆದು ಹಂಬಲಿಸಿದಳು. ರಾವಣನ ಹೃದಯ ಕರಗಲಿಲ್ಲ. ಲಂಕೆಯಲ್ಲಿ ತನ್ನ ಸಕಲ ವೈಭವಗಳನ್ನು ತೋರಿ ಸೀತೆಯನ್ನು ತನ್ನ ವಶಮಾಡಿಕೊಳ್ಳಲು ಪ್ರಯತ್ನಿಸಿದನು. ಸೀತೆ ಅವನ ವೈಭವಕ್ಕೆ ಮರುಳಾಗಲಿಲ್ಲ. ಅವಳನ್ನು ವಶಮಾಡಿಕೊಳ್ಳುವುದು ಎಷ್ಟರ ಕೆಲಸವೆಂದು ಭಾವಿಸಿದ ರಾವಣನಿಗೆ ಅವನ ಜೀವನದಲ್ಲಿ ಮೊದಲ ಬಾರಿಗೆ ಪತಿವ್ರತೆಯ ನಿಷ್ಠೆ ಎಷ್ಟು ದೊಡ್ಡದೆಂಬುದು ತಿಳಿದಂತಾಯಿತು. ಆದರೆ ಸೀತೆಯನ್ನು ಬಿಡಲಾರದ ಮೋಹ. ಮಾಲ್ಯವಂತನು ಬುದ್ಧಿಹೇಳಿದಾಗ "ನನ್ನ ದೇಹ ಎರಡಾದರೂ ಸೀತೆಯನ್ನು ಬಿಡುವುದಿಲ್ಲ" ಎಂದನು. ಸೀತೆಯು ಎಷ್ಟು ವಿಧದಲ್ಲಿ ವಿವೇಕ ಹೇಳಿದರೂ ಅವನು ಧರ್ಮವನ್ನು ತಿಳಿಯಲಿಲ್ಲ. ಪ್ರಬಲವಾದ ಕಾಮಕ್ಕೆ ವಶವಾದವನು ಎಂತಹ ಅಧೋಗತಿಗೆ ಇಳಿಯುವನೆಂಬುದಕ್ಕೆ ರಾವಣನೆ ಉತ್ತಮ ನಿದರ್ಶನ. ರಾವಣನಿಗೆ ಯಾರು ವಿವೇಕ ಹೇಳಿದರೂ ಕೇಳುವ ಸಹನೆಯಾಗಲಿ ಸಂಯಮವಾಗಲಿ ಇರಲಿಲ್ಲ. ಅದರೊಡನೆ ತನಗೆ ಲೋಕದಲ್ಲಿ ಯಾರೂ ಸಮನಲ್ಲವೆಂಬ ಅಹಂಕಾರ ಬೇರೆ.

ತನ್ನ ಕಡೆಯ ವೀರರು ಒಬ್ಬೊಬ್ಬರಾಗಿ ಮಡಿದು ವೀರ ಪುತ್ರನಾದ ಇಂದ್ರಜಿತ್ತು ಹತನಾಗಲು ರಾವಣನಿಗೆ ಸೀತೆಯ ಮೇಲಿನ ಕ್ರೋಧ ಹೆಚ್ಚಾಯಿತು. ಕತ್ತಿಯನ್ನು ಝಳಪಿಸುತ್ತ ಸೀತೆಯನ್ನು ಕೊಲ್ಲುವೆನೆಂದು ಅವಳ ಬಳಿಗೆ ಧಾವಿಸಿದನು. ಆಗ

ಸುಪಾರ್ಶ್ವನು ರಾವಣನಿಗೆ ವಿವೇಕವನ್ನು ಹೇಳಿ ಸ್ತ್ರೀಹತ್ಯದಿಂದ ಅವನನ್ನು ಪಾರುಮಾಡಿದನು.

ರಾವಣನು ಯುದ್ಧ ಭೂಮಿಯಲ್ಲಿ ರಾಮನನ್ನು ಎದುರಿಸಿದಾಗ ಅವನ ಪರಾಕ್ರಮ ಚೆನ್ನಾಗಿ ತಿಳಿಯಿತು. ಶಕ್ತ್ಯಾಯುಧದಿಂದ ರಾಮಲಕ್ಷ್ಮಣರು ಮೂರ್ಛೆ ಹೋದುದನ್ನು ಸೀತೆಗೆ ಹೇಳಿ ಇನ್ನಾದರೂ ತನ್ನ ಕೈವಶವಾಗುವಳೆಂದು ರಾವಣನು ನಂಬಿದನು. ಆದರೆ ಸ್ವಲ್ಪ ಕಾಲದಲ್ಲಿಯೆ ಚೇತರಿಸಿಕೊಂಡ ರಾಮಲಕ್ಷ್ಮಣರು ವೀರಾವೇಶದಿಂದ ಹೋರಾಡಿದರು. ರಾಮನು ಅಪ್ರತಿಮನಾಗಿ ರಾವಣನನ್ನು ಎದುರಿಸಲು ರಾವಣನು ತುಂಬ ಬಳಲಿದನು. ಈ ಸಮಯದಲ್ಲಿ ರಾಮನು ರಾವಣನನ್ನು ಕೊಲ್ಲದೆ, "ಹೋಗು, ಬಹಳ ಬಳಲಿರುವೆ, ಈ ದಿನದ ಬಳಲಿಕೆಯನ್ನು ಪರಿಹರಿಸಿಕೊಂಡು ಹೊಸ ರಥವನ್ನೇರಿ ನಾಳೆ ಬಾ" ಎಂದು ಹೇಳಿ ಕಳುಹಿಸಿದನು. ರಾವಣನ ಹೃದಯದಲ್ಲಿ ಅವನ ಜೀವನದಲ್ಲಿಯೆ ಮೊದಲ ಬಾರಿಗೆ ಭಯವೆಂಬುದು ಮೂಡಿತು. ಈ ಸಂದರ್ಭವನ್ನು ವಾಲ್ಮೀಕಿ ಮನಮುಟ್ಟುವಂತೆ ಚಿತ್ರಿಸಿದ್ದಾನೆ.

ಸ ಪ್ರವಿಶ್ಯ ಪುರೀಂ ಲಂಕಾಂ ರಾಮಬಾಣಭಯಾರ್ದಿತಃ |
ಭಗ್ನದರ್ಪಸ್ತದಾ ರಾಜಾ ಬಭೂವ ವ್ಯಥಿತೇನ್ದ್ರಿಯಃ ||
ಮಾತಙ್ಗ ಇವ ಸಿಂಹೇನ ಗರುಡೇನೇವ ಪನ್ನಗಃ |
ಅಭಿಭೂತೋऽಭವದ್ರಾಜಾ ರಾಘವೇಣ ಮಹಾತ್ಮನಾ ||
ಬ್ರಹ್ಮದಂಡ ಪ್ರಕಾಶಾನಾಂ ವಿದ್ಯುತ್ಸದೃಶವರ್ಚಸಾಮ್ |
ಸ್ಮರನ್ ರಾಘವಬಾಣಾನಾಂ ವಿವ್ಯಥೇ ರಾಕ್ಷಸೇಶ್ವರಃ ||

ರಾವಣನ ಸ್ಥಿತಿ ಸಿಂಹದಿಂದ ಏಟು ತಿಂದ ಆನೆಯಂತಾಗಿತ್ತು. ಗರುಡನಿಂದ ಹತವಾದ ಸರ್ಪದಂತಾಗಿತ್ತು. ರಾಮ ಬಾಣಗಳು

ಬ್ರಹ್ಮದಂಡದಂತೆ ಕಾಣಿಸತೊಡಗಿದುವು. ಆ ಬಾಣಗಳನ್ನು ಸ್ಮರಿಸುತ್ತ ಬಹು ದುಃಖಗೊಂಡನು. ಇಂತಾದರೂ ಅವನ ವೀರಾವೇಶ ಕಡಿಮೆಯಾಗಲಿಲ್ಲ. ಮರುದಿನ ರಾಮನನ್ನು ಮತ್ತೆ ಎದುರಿಸಿದನು. ಯುದ್ಧ ಭಯಂಕರವಾಗಿ ನಡೆಯಿತು. ರಾವಣನ ಸಾರಥಿ ರಾವಣನಿಗೆ ಆಗುವ ಆಘಾತವನ್ನು ತಪ್ಪಿಸಲು ಯುದ್ಧರಂಗದ ಮಧ್ಯದಿಂದ ರಥವನ್ನು ಬೇರೆ ಕಡೆಗೆ ಸ್ವಲ್ಪ ದೂರ ಓಡಿಸಿದನು. ವೀರನಾದ ರಾವಣನಿಗೆ ಸಾರಥಿಯ ವರ್ತನೆ ಸರಿ ಬೀಳದೆ ಹೋಯಿತು. ಸಾರಥಿಯ ವರ್ತನೆ ತನಗೆ ಅಪಮಾನವೆಂದು ಭಾವಿಸಿದನು. "ಚಿರಕಾಲ ಆರ್ಜಿಸಿದ ನನ್ನ ಯಶಸ್ಸು, ವೀರ್ಯ, ತೇಜಸ್ಸು–ಇವುಗಳನ್ನು ನೀನಿಂದು ಹಾಳುಮಾಡಿದೆ"–ಎಂದು ಸಾರಥಿಯನ್ನು ತೆಗಳಿದನು. ಈ ಸಂದರ್ಭದಲ್ಲಿ ಅವನ ಕ್ಷಾತ್ರ ತೇಜಸ್ಸು ಚೆನ್ನಾಗಿ ಪ್ರಕಟವಾಗುತ್ತದೆ. ಆದರೆ ಇಂತಹ ಸಾಹಸಿ ಸೀತೆಯನ್ನು ಏಕೆ ಕಳ್ಳನಂತೆ ಕದ್ದೊಯ್ದನೆಂಬ ಸಂಶಯ ಬರುತ್ತದೆ. ಅವನ ಸ್ತ್ರೀ ವ್ಯಾಮೋಹವೆ ಅದಕ್ಕೆ ಪ್ರಬಲವಾದ ಕಾರಣ. ಈ ಒಂದು ದೋಷವೆ ಅವನ ಇತರ ಗುಣಗಳನ್ನು ಕಬಳಿಸಿ ಅವನ ಪತನಕ್ಕೆ ಕಾರಣವಾಯಿತು. ರಾವಣನು ಕಾಮಿಯಾಗಿ ಸೀತೆಯನ್ನು ಬಲಾತ್ಕಾರವಾಗಿ ತನ್ನ ಅಮನೆಗೆ ಸೇರಿಸಿ ಅವಳ ದೇಹವನ್ನು ಭೋಗಿಸುವ ಮಹಾ ಪಾಪಕಾರ್ಯಕ್ಕೆ ತೊಡಗಲಿಲ್ಲ. ಇದು ರಾಕ್ಷಸ ಹೃದಯದಲ್ಲಿದ್ದ ಉದಾತ್ತ ಗುಣ.

ರಾವಣನು ರಾಮಬಾಣದಿಂದ ಹತನಾಗಿ ಬಿದ್ದಾಗ ಮಂಡೋದರಿ ದುಃಖಿಸುತ್ತ ತನ್ನ ಪತಿಯ ವಿಚಾರವಾಗಿ ಹೇಳಿದ ಮಾತುಗಳು ರಾವಣನ ಅಧಃಪತನಕ್ಕೆ ಕಾರಣವನ್ನು ತಿಳಿಸುತ್ತವೆ. ಗತಪ್ರಾಣನಾದ ಪತಿಯನ್ನು ಕಂಡು ಶೋಕಿಸುತ್ತ

ಮಂಡೋದರಿ, "ನಿನ್ನ ಯೌವನದಲ್ಲಿ ಇಂದ್ರಿಯ ನಿಗ್ರಹವನ್ನು ಮಾಡಿ ಅಲೌಕಿಕ ಶಕ್ತಿಗಳನ್ನು ಪಡೆದೆ. ಇವೆಲ್ಲ ನಿನಗೆ ಇಂದ್ರಿಯ ನಿಗ್ರಹದಿಂದ ಲಭಿಸಿತು. ಈ ಇಂದ್ರಿಯಗಳು ನಿನ್ನ ಮೇಲೆ ಕ್ರೋಧಗೊಂಡುವೊ ಏನೊ! ನೀನು ಅವುಗಳ ಕೈಗೆ ಸಿಕ್ಕಿ ಸ್ತ್ರೈಣನಾದೆ. ಪತಿವ್ರತೆಯಾದ ಸೀತೆಯನ್ನು ಬಲಾತ್ಕಾರವಾಗಿ ಎಳೆದು ತಂದೆ. ಅವಳ ಪಾತಿವ್ರತ್ಯ ನಿನ್ನನ್ನು ಆ ಕ್ಷಣದಲ್ಲಿಯೇ ಭಸ್ಮೀಭೂತವಾಗಿ ಮಾಡಬೇಕಾಗಿತ್ತು. ಆದರೆ ನಿನ್ನ ಪುಣ್ಯ ಫಲ ಸ್ವಲ್ಪವಿದ್ದುದರಿಂದ ನೀನಿಷ್ಟುಕಾಲ ಬದುಕಿದೆ. ನಾನಿರು ವಾಗ ಸೀತೆಯನ್ನು ನನಗಿಂತಲೂ ಉತ್ತಮಳೆಂದು ಏಕೆ ಭಾವಿಸಿದೆ? ನೀನು ವಿಷಯಲಂಪಟ, ಹುಚ್ಚನಾಗಿ ಹೋದೆ. ನಿನ್ನವಳಾಗುವಳೆಂದು ಸೀತೆಯನ್ನು ಎಳೆದು ತಂದೆ. ಆದರೆ ಇಂದು ನೀನು ನನ್ನನ್ನು ಅಗಲಿದೆ. ಸೀತೆ ಮಾತ್ರ ಪತಿಯನ್ನು ಸೇರಿ ಸುಖವಾಗಿರುವಳು. ಪತಿವ್ರತೆಯ ಕಣ್ಣೀರು ದುಷ್ಟರನ್ನು ಶಿಕ್ಷಿಸದೆ ಬಿಡುವುದಿಲ್ಲ. ಅದೆಷ್ಟು ಜನ ಪತಿವ್ರತೆಯರ ಕಣ್ಣೀರಿಗೆ ನೀನು ಕಾರಣನಾದೆ!" ಹೀಗೆಂದು ಶೋಕಿಸುತ್ತ ಪ್ರಲಾಪಿಸು ತ್ತಿದ್ದ ಮಂಡೋದರಿಯ ಮಾತುಗಳಲ್ಲಿ ರಾವಣನ ಜೀವನದ ವೈಭವಕ್ಕೂ ಪತನಕ್ಕೂ ಕಾರಣಗಳು ಸ್ಫುಟವಾಗಿ ತಿಳಿಯುತ್ತವೆ.

ಕಾಮಿಯಾಗಿ ಅಧೋಗತಿಗೆ ಇಳಿದವನ ಸ್ಥಿತಿ ಎಷ್ಟು ದಾರುಣವಾದುದೆಂಬುದು ರಾವಣನ ದೃಷ್ಟಾಂತದಿಂದ ಚೆನ್ನಾಗಿ ತಿಳಿಯುತ್ತದೆ. ಚಂಚಲವಾದ ಮನಸ್ಸು ಒಮ್ಮೆ ಜಾರಿದರೆ ಜಾರುತ್ತಲೆ ಹೋಗುತ್ತದೆ. ರಾವಣನ ಪಾಪಕಾರ್ಯದಿಂದ ಅವನ ಕುಲವೆ ವಿನಾಶವಾಗುವುದೆಂದು ರಾಮನು ಹೇಳಿದ ಮಾತು ಸರ್ವಕಾಲಕ್ಕೂ ಸತ್ಯವಾದ ಮಾತು. ರೂಪ, ಧೈರ್ಯ, ಸಾಹಸ, ವೈಭವ—ಇವೆಲ್ಲ ರಾವಣನಲ್ಲಿದ್ದುವು.

ಆದರೆ ಅವನ ಅಧರ್ಮ ವೃತ್ತಿಯಿಂದ ಅವನ ಮಿತ್ರರೂ ಶತ್ರುಗಳಾದರು. ಅವನ ಪಾಪಕಾರ್ಯದಿಂದ ಅವನ ಕುಲವೇ ನಾಶವಾಯಿತು. ಅಧರ್ಮದಿಂದ ಪತನವೆಂಬುದು ನಿಶ್ಚಯ; ಇದು ಸರ್ವಕಾಲಕ್ಕೂ ಸತ್ಯ.

ವಾಲ್ಮೀಕಿಯ ವರ್ಣನೆಗಳು

ಪ್ರಕೃತಿಯ ಸೌಂದರ್ಯವನ್ನಾಗಲಿ ಮಾನವಸ್ವಭಾವವನ್ನಾಗಲಿ ವರ್ಣಿಸುವುದರಲ್ಲಿ ವಾಲ್ಮೀಕಿ ತನ್ನ ಅದ್ಭುತ ಕೌಶಲವನ್ನು ತೋರಿದ್ದಾನೆ. ಅವನ ಮಹಾಪ್ರತಿಭೆಯಲ್ಲಿ ಸೃಷ್ಟಿಯ ಸಕಲವ್ಯಾಪಾರಗಳೂ ಪ್ರತಿಬಿಂಬಿತವಾಗುತ್ತವೆ. ಅವನ ವರ್ಣನೆಗಳು ಅವನ ರಸಹೃದಯವನ್ನು ತೋರುವ ಕೇಂದ್ರಗಳು. ಇಲ್ಲಿ ವಾಲ್ಮೀಕಿಯ ಕೆಲವು ಪ್ರಕೃತಿವರ್ಣನೆಗಳನ್ನು ಮಾತ್ರ ನಿರೂಪಿಸಿದೆ. ಮಾನವ ಸ್ವಭಾವದ ವರ್ಣನೆಯನ್ನು ಸ್ವಲ್ಪಮಟ್ಟಿಗೆ ಪಾತ್ರಗಳ ನಿರೂಪಣೆಯಲ್ಲಿ ಕಾಣಬಹುದು. ವಾಲ್ಮೀಕಿ ಚಿತ್ರಕೂಟವನ್ನು ವರ್ಣಿಸಿರುವ ರೀತಿ ಮನೋಜ್ಞವಾಗಿದೆ. ದಂಡಕಾರಣ್ಯದ ಸೌಂದರ್ಯವನ್ನು ನಮ್ಮ ಕಣ್ಣಮುಂದೆ ಸ್ಪಷ್ಟವಾಗಿ ಚಿತ್ರಿಸಿದಂತಿದೆ ಆ ವರ್ಣನೆ. ರಾಮನು ಚಿತ್ರಕೂಟವನ್ನು ಕಂಡು ಸೀತೆಗೂ ಲಕ್ಷ್ಮಣನಿಗೂ ವರ್ಣಿಸಿ ಹೇಳುವ ರೀತಿ ಇದು:

ಆದೀಪ್ತಾನಿವ ವೈದೇಹಿ ಸರ್ವತಃ ಪುಷ್ಪಿತಾನ್ನಗಾನ್ |
ಸ್ವೈಃ ಪುಷ್ಪೈಃ ಕಿಂಶುಕಾನ್ ಪಶ್ಯ ಮಾಲಿನಃ ಶಿಶಿರಾತ್ಯಯೇ || ೬ ||

ಪಶ್ಯ ಭಲ್ಲಾತಕಾನ್ ಬಿಲ್ವಾನ್ನರೈರನುಪಸೇವಿತಾನ್ |
ಫಲಪುಷ್ಪೈರವನತಾನ್ನೂನಂ ಶಕ್ಷ್ಯಾಮಿ ಜೀವಿತುಮ್ || ೭ ||

ಪಶ್ಯ ದ್ರೋಣ ಪ್ರಮಾಣಾನಿ ಲಂಬಮಾನಾನಿ ಲಕ್ಷ್ಮಣ |
ಮಧೂನಿ ಮಧುಕಾರೀಭಿಃ ಸಂಭೃತಾನಿ ನಗೇನಗೇ ॥ ೮ ॥

ಏಷ ಕ್ರೋಶತಿ ನತ್ಯೂಹಸ್ತಂ ಶಿಖೀ ಪ್ರತಿಕೂಜತಿ |
ರಮಣೀಯ ವನೋದ್ದೇಶೇ ಪುಷ್ಪಸಂಸ್ತರ ಸಂಕಟೇ ॥ ೯ ॥

ಮಾತಂಗಯೂಥಾನುಸೃತಂ ಪಕ್ಷಿಸಂಘಾನುನಾದಿತಮ್
ಚಿತ್ರಕೂಟಮಿಮಂ ಪಶ್ಯ ಪ್ರವೃದ್ಧ ಶಿಖರಂ ಗಿರಿಮ್ ॥ ೧೦ ॥

ಸಮಂಭೂಮಿತಲೇ ರಮ್ಯೇ ದ್ರುಮೈರ್ಬಹುಭಿರಾವೃತೇ
ಪುಣ್ಯೇ ರಂಸ್ಯಾಮಹೇ ತಾತ ಚಿತ್ರಕೂಟಸ್ಯ ಕಾನನೇ ॥ ೧೧ ॥

ತತಸ್ತೌ ಪಾದಚಾರೇಣ ಗಚ್ಛನ್ತೌ ಸಹ ಸೀತಯಾ
ರಮ್ಯಮಾಸೇದತುಃ ಶೈಲಂ ಚಿತ್ರಕೂಟಂ ಮನೋರಮಮ್ ॥ ೧೨ ॥

ತಂ ತು ಪರ್ವತಮಾಸಾದ್ಯ ನಾನಾಪಕ್ಷಿಗಣಾಯುತಮ್ ॥ ೧೩ ॥
ಬಹುಮೂಲಫಲೋ ರಮ್ಯಃ ಸ್ವಾಜೀವಃ ಪ್ರತಿಭಾತಿ ಮೇ ॥ ೧೪ ॥

ಅಯೋಧ್ಯಾಕಾಂಡ, ಸರ್ಗ ೫೬

"ನೋಡು ಸೀತೆ, ಶಿಶಿರ ಋತು ಕಳೆದು ಪಲಾಶ ವೃಕ್ಷಗಳು ಪುಷ್ಪ ಭರಿತವಾಗಿವೆ. ಫಲಪತ್ರಗಳಿಂದ ಕೂಡಿ ಬಾಗಿ ನಿಂತಿರುವ ಗೇರು ಹಣ್ಣಿನ ಗಿಡಗಳನ್ನು ನೋಡು. ಇದನ್ನು ನೋಡಿದರೆ ಜೀವನವು ಪ್ರಿಯವಾಗಿ ಕಾಣುತ್ತದೆ. ನೋಡು ಲಕ್ಷ್ಮಣ, ಗಿಡ ಗಿಡಗಳಲ್ಲಿ ಮಧುವಿನಿಂದ ತುಂಬಿ ಇಳಿಬಿದ್ದಿರುವ ಜೇನುಗೂಡು ಗಳನ್ನು! ಹೂವಿನ ಸೌರಭದಿಂದ ತುಂಬಿ ಮನೋಹರವಾದ ಈ ವನದಲ್ಲಿ ಮಳೆಗುಟುಕನ ಹಕ್ಕಿಗಳು ಕೂಗುತ್ತಿವೆ. ಆ ಧ್ವನಿಯನ್ನು ಕೇಳಿ ನವಿಲುಗಳು ಪ್ರತಿಧ್ವನಿ ಮಾಡುತ್ತಿವೆ. ಆನೆಗಳ ಸಂಚಾರದಿಂದಲೂ ಪಕ್ಷಿಗಳ ಬಹುವಿಧ ಕೂಜನ ದಿಂದಲೂ ಪ್ರತಿಧ್ವನಿತವಾದ ಈ ಚಿತ್ರಕೂಟವನ್ನು ನೋಡು.

ಬಹುವಿಧ ವೃಕ್ಷಗಳಿಂದ ಸಮತಲವಾದ ಭೂಮಿತಲದಿಂದ ರಮ್ಯವೂ ಪುಣ್ಯಕರವೂ ಆದ ಈ ಚಿತ್ರಕೂಟದಲ್ಲಿ ವಿಹರಿಸೋಣ.” ಸೀತಾರಾಮ ಲಕ್ಷ್ಮಣರು ಮನೋರಮವಾದ ಚಿತ್ರಕೂಟವನ್ನು ಸೇರಿದರು. ಅಲ್ಲಿ ಬಹು ರೀತಿಯ ಕಂದ ಮೂಲ ಫಲಗಳೂ ನಾನಾ ರೀತಿಯ ಪಕ್ಷಿಗಳೂ ತುಂಬಿದ್ದುವು. ಇಂತಹ ಸುಂದರ ಚಿತ್ರಕೂಟವನ್ನು ಕಂಡ ರಾಮನಿಗೆ ತನ್ನ ಆತ್ಮದರ್ಶನ ಮಾಡಿದಂತೆ ಆನಂದವಾಯಿತು.

ಮಂದಾಕಿನೀ ನದಿಯ ಶಿವ ಸೌಂದರ್ಯವನ್ನು ಸೀತೆಗೆ ತೋರಿಸಿ ರಾಮನು ನದಿಯನ್ನು ವರ್ಣಿಸಿರುವುದು ಹೃದ್ಯವಾಗಿದೆ. ವಾಲ್ಮೀಕಿಯ ವರ್ಣನಾ ಸಾಮರ್ಥ್ಯವನ್ನು ಕವಿತೆಯ ಶಬ್ದ ಸೌಂದರ್ಯವನ್ನೂ ಇಲ್ಲಿ ಸಂದರ್ಶಿಸುತ್ತೇವೆ.

ವಿಚಿತ್ರ ಪುಲಿನಾಂ ರಮ್ಯಾಂ ಹಂಸಸಾರಸ ಸೇವಿತಾಮ್ |
ಕುಸುಮೈರುಪಸಂಪನ್ನಾಂ ಪಶ್ಯ ಮನ್ದಾಕಿನೀಂ ನದೀಮ್ ॥ ೩ ॥

ನಾನಾವಿಧೈಸ್ತೀರರುಹೈರ್ವೃತಾಂ ಪುಷ್ಪಫಲದ್ರುಮೈಃ |
ರಾಜನ್ತೀಂ ರಾಜರಾಜಸ್ಯ ನಲಿನೀಮಿವ ಸರ್ವತಃ ॥ ೪ ॥

ಮೃಗಯೂಥನಿಪೀತಾನಿ ಕಲುಷಾಮ್ಭಾಂಸಿ ಸಾಂಪ್ರತಮ್ |
ತೀರ್ಥಾನಿ ರಮಣೀಯಾನಿ ರತಿಂ ಸಂಜನಯನ್ತಿ ಮೇ ॥ ೫ ॥

ಜಟಾಜಿನಧರಾಃ ಕಾಲೇ ವಲ್ಕಲೋತ್ತರ ವಾಸಸಃ |
ಋಷಯಸ್ತ್ವವಗಾಹನ್ತೇ ನದೀಂ ಮನ್ದಾಕಿನೀಂ ಪ್ರಿಯೇ ॥ ೬ ॥

ಆದಿತ್ಯ ಮುಪತಿಷ್ಠನ್ತೇ ನಿಯಮಾದೂರ್ಧ್ವಃ ಬಾಹವಃ ।
ಏತೇ ಪರೇ ವಿಶಾಲಾಕ್ಷೀ ಮುನಯಃ ಸಂಶಿತವ್ರತಾಃ ॥ ೭ ॥

ಮಾರುತೋದ್ಧೂತ ಶಿಖರೈಃ ಪ್ರನೃತ್ತ ಇವ ಪರ್ವತಃ |
ಪಾದಪೈಃ ಪುಷ್ಪಪತ್ರಾಣಿ ಸೃಜದ್ಭಿರಭಿತೋ ನದೀಮ್ ॥ ೮ ॥

ಕ್ವಚಿನ್ಮಣಿನಿಕಾಶೋದಾಂ ಕ್ವಚಿತ್ಪುಲಿನ ಶಾಲಿನೀಮ್ |
ಕ್ವಚಿತ್ ಸಿದ್ಧ ಜನಾಕೀರ್ಣಾಂ ಪಶ್ಯ ಮನ್ದಾಕಿನೀಂ ನದೀಮ್ || ೯ ||

ನಿರ್ಧೂತಾನ್ ವಾಯುನಾ ಪಶ್ಯ ವಿತತಾನ್ ಪುಷ್ಪಸಂಚಯಾನ್ |
ಪೋಪ್ಲೂಯ ಮಾನಾನ್ ಅಪರಾನ್ ಪಶ್ಯ ತ್ವಂ ತನುಮಧ್ಯಮೇ ||೧೦||

ಪಶ್ಯೈತದ್ವಲ್ಗುವಚಸೋ ರಥಾಙ್ಗಾಹ್ವಯನಾ ದ್ವಿಜಾಃ |
ಅಧಿರೋಹನ್ತಿ ಕಲ್ಯಾಣಿ ನಿಷ್ಕೂಜನ್ತಃ ಶುಭಾ ಗಿರಃ || ೧೧ ||

—ಅಯೋಧ್ಯಾ ಕಾಂಡ, ಸರ್ಗ ೯೫.

"ನೋಡು ಸೀತೆ, ವಿಚಿತ್ರವಾದ ಮರಳಿನರಾಶಿ ಹಂಸಸಾರಸ ಪಕ್ಷಿಗಳು, ಕುಸುಮಗಳು—ಇವುಗಳಿಂದ ಕೂಡಿದ ಮಂದಾಕಿನಿ ನದಿಯು ಎಷ್ಟು ರಮಣೀಯವಾಗಿದೆ! ನಾನಾ ವಿಧವಾದ ಪುಷ್ಪ ಫಲಭರಿತವಾದ ಮರಗಳಿಂದ ತುಂಬಿದ ಕುಬೇರನ ಸೌಗಂಧಿಕಾ ಸರೋವರದಂತೆ ರಂಜಿಸುತ್ತಿದೆ. ಜಿಂಕೆಗಳು ಈಗ ತಾನೆ ನೀರು ಕುಡಿದು ಹೋಗಿರುವುದರಿಂದ ನೀರು ಆ ಭಾಗದಲ್ಲಿ ಕುಂಕುಮರಾಗವಾಗಿದೆ. ಜಟಾಜಿನ ವಲ್ಕಲ ಧಾರಿಗಳಾದ ಋಷಿಗಳು ಸ್ನಾನಕ್ಕಾಗಿ ಈ ನದಿಯನ್ನು ಪ್ರವೇಶಿಸುತ್ತಿದ್ದಾರೆ. ಕೆಲವು ಋಷಿಗಳು ತಮ್ಮ ಬಾಹುಗಳನ್ನು ಮೇಲಕ್ಕೆತ್ತಿ ನಿಯಮದಿಂದ ಸೂರ್ಯನನ್ನು ಸ್ತೋತ್ರ ಮಾಡುತ್ತಿದ್ದಾರೆ. ನರ್ತನ ಮಾಡುತ್ತ ಹೂವುಗಳನ್ನು ಎರಚುವಂತೆ ಚಿತ್ರಕೂಟದ ಮರಗಳು ಪುಷ್ಪ ಪತ್ರಗಳನ್ನು ಸುತ್ತಲೂ ಚೆಲ್ಲುತ್ತಿವೆ. ಒಂದೊಂದು ಕಡೆ ನದಿಯ ನೀರು ಮುತ್ತಿನ ಮಣಿಯ ಬಣ್ಣದಿಂದ ಹೊಳೆಯುತ್ತಿದೆ. ಮತ್ತೆ ಕೆಲವು ಕಡೆ ಮರಳಿನ ರಾಶಿ ಸುಂದರವಾಗಿ ಕಾಣುತ್ತಿದೆ. ಗಾಳಿಯಿಂದ ತೇಲಿಬಂದ

ಹೂಗಳು ನೀರಿನಲ್ಲಿ ತೇಲುತ್ತಿವೆ. ಸುಮಧುರ ಧ್ವನಿಗೈಯುತ್ತ ಚಕ್ರವಾಕ ಪಕ್ಷಿಗಳು ಹೂವಿನ ರಾಶಿಯಲ್ಲಿ ಸಂಚರಿಸುತ್ತಿವೆ."

ಸಹಜವಾದ ವರ್ಣನೆಯಿಂದಲೆ ವಾಲ್ಮೀಕಿ ನದಿಯ ದಿವ್ಯ ಸೌಂದರ್ಯವನ್ನು ಚಿತ್ರಿಸಿ ಕಣ್ಣಿಂದೆ ನಲಿಯುವಂತೆ ಮಾಡಿ ಮನಸ್ಸನ್ನು ಸುಮಧುರ ರಸಕ್ಕೇರಿಸುತ್ತಾನೆ.

ಚಳಿಗಾಲದ ವರ್ಣನೆ ಅತ್ಯಂತ ಸರಳವಾದುದಾದರೂ ಚಳಿಗಾಲದ ಅನುಭವವು ಆ ವರ್ಣನೆಗಳನ್ನು ಓದಿದಾಗ ನಮ್ಮಗಾಗುತ್ತದೆ.

ಅತ್ಯಂತ ಸುಖಸಂಚಾರಾ ಮಧ್ಯಾಹ್ನೇ ಸ್ಪರ್ಶತಃ ಸುಖಾಃ |
ದಿವಸಾಃ ಸುಭಗಾದಿತ್ಯಾಶ್ಛಾಯಾ ಸಲಿಲದುರ್ಭಗಾಃ ॥ ೧೦ ॥

ರವಿಸಂಕ್ರಾನ್ತ ಸೌಭಾಗ್ಯಸ್ತುಷಾರಾರುಣಮಣ್ಡಲಃ |
ನಿಃಶ್ವಾಸಾನ್ಧ ಇವಾದರ್ಶಶ್ಚನ್ದ್ರಮಾನ ಪ್ರಕಾಶತೇ ॥ ೧೩ ॥

ಖರ್ಜೂರ ಪುಷ್ಪಾಕೃತಿಭಿಃ ಶಿರೋಭಿಃ ಪೂರ್ಣತಣ್ಡುಲೈಃ |
ಶೋಭನ್ತೇ ಕಿಂಚಿದಾಲಮ್ಬಾಃ ಶಾಲಯಃ ಕನಕಪ್ರಭಾಃ ॥ ೧೭ ॥

ಮಯೂಖೈರುಪಸರ್ಪದ್ಭಿರ್ಹಿಮನೀಹಾರ ಸಂವೃತೈಃ |
ದೂರಮಭ್ಯುದಿತಃ ಸೂರ್ಯಃ ಶಶಾಙ್ಕ ಇವ ಲಕ್ಷ್ಯತೇ ॥ ೧೮ ॥

ಅರಣ್ಯಕಾಂಡ, ಸರ್ಗ ೧೬.

"ಮಧ್ಯಾಹ್ನ ಕಾಲದಲ್ಲಿ ಸುಖಸ್ಪರ್ಶವುಳ್ಳ ಸೂರ್ಯನ ಕಿರಣಗಳು ಸಂಚಾರಕ್ಕೆ ಅತ್ಯಂತ ಸುಖಪ್ರದವಾಗಿವೆ. ನೀರಾಗಲಿ ನೆರಳಾಗಲಿ ಹಿತಕರವಾಗಿಲ್ಲ. ಸುಖಕರವಾದ ಸೂರ್ಯನ ಬಿಂಬವು ಮಂಜಿನಿಂದ ಆವೃತವಾಗಿದೆ. ನಿಟ್ಟುಸಿರಿನಿಂದ ಮಲಿನವಾದ ಕನ್ನಡಿಯಂತೆ ಚಂದ್ರನು ಪ್ರಕಾಶಿಸದೆ ಹೋಗಿದ್ದಾನೆ. ಖರ್ಜೂರ ಪುಷ್ಪಗಳಂತಿರುವ ತುಂಬಿದ ಬತ್ತದ ತೆನೆಗಳು

ಸ್ವಲ್ಪ ಬಗ್ಗಿ ಚಿನ್ನದ ಕಾಂತಿಯಿಂದ ಶೋಭಿಸುತ್ತವೆ. ದೂರದಲ್ಲಿ ಉದಿಸುವ ಸೂರ್ಯನು ತಣ್ಣಗಿರುವ ಮಂಜಿನಿಂದ ಆವರಿಸಿ ಚಂದ್ರನಂತೆ ಕಾಣುತ್ತಾನೆ"

ಹಿಮಗಾಲದ ವರ್ಣನೆ ಇನ್ನೂ ದೀರ್ಘವಾಗಿದೆ. ಇಲ್ಲಿ ಕೆಲವು ಭಾಗವನ್ನು ಮಾತ್ರ ಉದಾಹರಿಸಿದೆ. ಯಾವ ವರ್ಣನೆಯಲ್ಲಾಗಲಿ ಕವಿ ಪ್ರತಿಭೆ ಮುಗಿಲು ಮುಟ್ಟುತ್ತದೆ. ಸೃಷ್ಟಿಯಲ್ಲಿ ಪ್ರತಿಯೊಂದು ಋತುವಿಗೂ ಒಂದೊಂದು ಸೊಬಗಿದೆ. ಆ ಸೌಂದರ್ಯವನ್ನು ಕವಿ ಪ್ರತಿಭೆ ಗ್ರಹಿಸುತ್ತದೆ. ಇದು ಶರತ್ಕಾಲದ ವರ್ಣನೆ:

ತರ್ಪಯಿತ್ವಾ ಸಹಸ್ರಾಕ್ಷಃ ಸಲಿಲೇನ ವಸುಂಧರಾಮ್ ।
ನಿರ್ವರ್ತಯಿತ್ವಾ ಸಸ್ಯಾನಿ ಕೃತಕರ್ಮಾ ವ್ಯವಸ್ಥಿತಃ ॥
ದೀರ್ಘಗಮ್ಭೀರ ನಿರ್ಘೋಷಾಃ ಶೈಲದ್ರುಮ ಪುರೋಗಮಾಃ ।
ವಿಸೃಜ್ಯ ಸಲಿಲಂ ಮೇಘಾಃ ಪರಿಶ್ರಾನ್ತಾ ನೃಪಾತ್ಮಜ ॥

ನೀಲೋತ್ಪಲದಲಶ್ಯಾಮಾಃ ಶ್ಯಾಮೀಕೃತ್ವಾ ದಿಶೋ ದಶ ।
ವಿಮದಾ ಇವ ಮಾತಂಗಾಃ ಶಾನ್ತವೇಗಾಃ ಪಯೋಧರಾಃ ॥

"ದೇವೇಂದ್ರನು ಮಳೆಯಿಂದ ಭೂಮಿಯನ್ನು ತೃಪ್ತಿಗೊಳಿಸಿ ಪೈರುಗಳನ್ನು ಪೋಷಿಸಿ ಕೃತಕೃತ್ಯನಾದನು. ದೀರ್ಘಗಂಭೀರ ಘೋಷಮಾಡುತ್ತ ಬೆಟ್ಟಗಳ ಹಾಗೂ ಮರಗಳ ಮುಂಭಾಗದಲ್ಲಿ ಯಾನ ಮಾಡುತ್ತಿದ್ದ ಮೇಘಗಳು ನೀರನ್ನು ಕಳೆದುಕೊಂಡು ಬಳಲಿವೆ. ಕನ್ನೈದಿಲೆಯಂತೆ ನೀಲವಾದ ಮೇಘಗಳು ಹತ್ತು ದಿಕ್ಕನ್ನೂ ನೀಲವಾಗಿ ಮಾಡಿ ಈಗ ಮದರಹಿತವಾದ ಆನೆಗಳಂತೆ ಶಾಂತವಾಗಿ ಚಲಿಸುತ್ತಿವೆ."

ಶರತ್ಕಾಲದ ವರ್ಣನೆ ವಿಸ್ತಾರವಾಗಿದೆ. ಅದರ ಸ್ವಲ್ಪ ಪರಿಚಯ ಮಾತ್ರ ಇಲ್ಲಿ ಮಾಡಿದೆ. ವಿಸ್ತಾರವಾದ ಆಕಾಶ ವನ್ನು ಚಿಕ್ಕ ಕೊಳದಲ್ಲಿ ಸಂದರ್ಶಿಸುವಂತೆ ಈ ಕೆಲವು ವರ್ಣನೆಗಳಿಂದ ವಾಲ್ಮೀಕಿಯ ವರ್ಣನಾ ಕೌಶಲ್ಯವನ್ನು ಅರಿಯಬಹುದು. ಪ್ರಕೃತಿಯ ಬಹುಮುಖಗಳನ್ನು ಕಂಡು ಅನುಭವಿಸಿ ತನ್ನ ಅದ್ಭುತ ಕವಿತಾ ಸಾಮರ್ಥ್ಯದಿಂದ ವರ್ಣಿಸಿ ದ್ದಾನೆ ವಾಲ್ಮೀಕಿ. ಹೃದಯವನ್ನು ನೇರವಾಗಿ ಪ್ರವೇಶಿಸಿ ಮನಸ್ಸಿಗೆ ಶಾಂತಿಯನ್ನೂ ರಸವನ್ನೂ ನೀಡುವ ಸಾಮರ್ಥ್ಯ ಋಷಿಪ್ರತಿಭೆಯ ಸರಳತೆಯಲ್ಲಿದೆ.

ವಾಲ್ಮೀಕಿಯ ಜೀವನ ದರ್ಶನ

ಸಮಾಜದ ವ್ಯವಸ್ಥೆಗೆ ಕುಟುಂಬ ಜೀವನವೇ ಅಸ್ತಿಭಾರ. ಜೀವನದಲ್ಲಿ ಒಬ್ಬರನ್ನೊಬ್ಬರು ಅರಿತು ಬದುಕಿ ಬಾಳುವುದು ಅತ್ಯಂತ ಆವಶ್ಯಕ. ಆದರೆ ಕುಟುಂಬದಲ್ಲಿ ಸಮಸ್ಯೆಗಳು ಇದ್ದೇ ಇರುತ್ತವೆ. ಎಲ್ಲರೂ ನಿಸ್ವಾರ್ಥಿಗಳಾಗಿ ಕುಟುಂಬದಲ್ಲಿ ಇರುವುದು ಕಷ್ಟ. ದಶರಥನ ಸಂಸಾರವನ್ನೆ ನಿದರ್ಶನವಾಗಿ ತೆಗೆದುಕೊಂಡು ನಮ್ಮ ಕಣ್ಮುಂದೆ ಕುಟುಂಬ ಜೀವನದ ಸಮಸ್ಯೆಗಳನ್ನು ಚಿತ್ರಿಸಿದ್ದಾನೆ ವಾಲ್ಮೀಕಿ ಮಹರ್ಷಿ. ದಶರಥನು ಮೂವರು ಪತ್ನಿಯರನ್ನು ಮದುವೆಯಾದವನು. ಕೌಸಲ್ಯೆ ಮಾನವೀಯ ಹೃದಯದಿಂದ ಕೂಡಿದ ಸುಶೀಲೆ. ಸುಮಿತ್ರೆ ಸಂಯಮಶೀಲೆ. ಕಿರಿಯರಾಣಿ ಕೈಕೇಯಿ ಸೌಂದ ರ್ಯದ ಅಧಿದೇವತೆ. ಈ ಮೂವರು ರಾಣಿಯರನ್ನು ಸಂತೋಷವಾಗಿರಿಸಲು ದಶರಥನು ಪ್ರಯತ್ನಿಸಿದನು. ಅವನ್ನ ಒಲವು ಹೆಚ್ಚಾಗಿ ಸುಂದರಿಯಾದ ಕೈಕೇಯಿಯ ಕಡೆಗೆ. ಇದ

ದಶರಥನ ದೋಷವೇನೊ ಹೌದು. ದಶರಥನ. ಮೂವರು ಪತ್ನಿಯರು ಉತ್ತಮ ವಂಶದವರಾದರೂ ಅವರಲ್ಲಿ ಸವತಿ ಮಾತ್ಸರ್ಯವಿತ್ತು. ಪತಿಯು ಎಷ್ಟೇ ಆದರ್ಶವ್ಯಕ್ತಿಯಾದರೂ ಮೂವರು ಪತ್ನಿಯರೊಡನೆ ಬದುಕುವುದು ಕಷ್ಟ ಎಂಬುದನ್ನು ವಾಲ್ಮೀಕಿಯ ದರ್ಶನ ಸಾರಿ ಹೇಳಿದೆ. ಏಕಪತ್ನೀಕತ್ವದ ಹಿರಿಯ ಆದರ್ಶವನ್ನು ರಾಮಸೀತೆಯರ ಜೀವನ ಚಿತ್ರಣದಲ್ಲಿ ಕವಿ ಸ್ಪಷ್ಟವಾಗಿ ನಮ್ಮ ಮುಂದೆ ಇರಿಸಿದ್ದಾನೆ.

ಮಂಥರೆಯಂಥವರು ಲೋಕದಲ್ಲಿ ಇದ್ದೇ ಇರುತ್ತಾರೆ. ಅಂಥವರ ದುರ್ಬೋಧನೆಗೆ ಒಳಗಾಗುವವರೂ ಇರುತ್ತಾರೆ. ದುಷ್ಟರ ಬೋಧನೆಗೆ ಸಿಕ್ಕಿದರೆ ಉತ್ತಮರ ಮನಸ್ಸು ಎಷ್ಟು ಅಧೋಗತಿಗೆ ಇಳಿಯುವುದೆಂಬುದಕ್ಕೆ ಕೈಕೇಯಿಯೇ ನಿದರ್ಶನ. ಪತಿಯಾದ ದಶರಥನು ಪ್ರಲಾಪಿಸುತ್ತ ಪ್ರಾಣತ್ಯಾಗ ಮಾಡುತ್ತೇನೆ ಎಂದರೂ ಅವಳಿಗೆ ವಿವೇಕ ಬರಲಿಲ್ಲ. ದುಷ್ಟಸಂಗದಿಂದ ಮನಸ್ಸು ಎಷ್ಟು ಕೆಡಬಹುದೆಂಬುದಕ್ಕೆ ಇದೊಂದು ನಿದರ್ಶನ ಸಾಕು.

ಕುಟುಂಬದಲ್ಲಿ ಎಲ್ಲವೂ ಸರಿಯಾಗಿದ್ದಾಗ ಆದರ್ಶವ್ಯಕ್ತಿಯಾಗಿರುವುದು ಸುಲಭವಾಗಬಹುದು. ಯಾರಾದರೂ ಸ್ವಾರ್ಥದಿಂದ ವರ್ತಿಸಿದಾಗ ಸಾಮಾನ್ಯವಾಗಿ ಜಗಳವಾಗಿ ಕುಟುಂಬವು ಒಡೆದು ಹೋಗುವುದೇ ಹೆಚ್ಚು. ಅಂತಹ ಸನ್ನಿವೇಶದಲ್ಲಿ ರಾಮನು ಹೇಗೆ ನಡೆದುಕೊಂಡನೆಂಬುದು ನಮಗೆಲ್ಲರಿಗೂ ಮಾರ್ಗದರ್ಶನ ಮಾಡುವ ವಿಚಾರ. ಕೈಕೇಯಿ ಭರತನಿಗೆ ರಾಜ್ಯಬರಲೆಂದು ಆಶಿಸಿದುದಕ್ಕೆ ಅವಳ ಅಭಿಲಾಷೆಯಂತೆ ಅರಣ್ಯಕ್ಕೆ ಹೊರಟು ತಂದೆಯ ವಚನ ಪರಿಪಾಲನೆ ಮಾಡಿದನು. ರಾಮನು ಕೋಪಗೊಂಡಿದ್ದರೆ ಎಲ್ಲರನ್ನೂ ಅದಗಿಸಿ

ತಾನು ಯುವರಾಜನಾಗುವುದು ಕಷ್ಟವಾಗಿರಲಿಲ್ಲ. ಕುಟುಂಬದ ಹಿತಕ್ಕಾಗಿ ತನ್ನ ಸುಖವನ್ನು ತ್ಯಜಿಸಿದನು. ಜಗತ್ತಿನ ಸ್ವಾರ್ಥ ವನ್ನು ನಿರ್ಮೂಲ ಮಾಡುವುದು ಪ್ರತೀಕಾರದಿಂದಲ್ಲ ಮಹತ್ತರ ತ್ಯಾಗದಿಂದ ಎಂಬುದು ಮಹರ್ಷಿ ವಾಲ್ಮೀಕಿಯ ದರ್ಶನ. ಇದು ಎಲ್ಲ ಕಾಲದಲ್ಲಿಯೂ ನಿಲ್ಲುವ ಚಿರನೂತನ ಸತ್ಯ. ಜಗತ್ತಿನ ಅಭ್ಯುದಯದ ರಹಸ್ಯ ಈ ತ್ಯಾಗದಲ್ಲಿದೆ. ಮಹತ್ತ್ವನ್ನು ಸಾಧಿಸಲು ತ್ಯಾಗದ ಆವಶ್ಯಕತೆ ತುಂಬಾ ಇದೆ.

ಆದರೆ ಎಲ್ಲಿ ತ್ಯಾಗಮಾಡಬೇಕೆಂಬ ವಿವೇಚನೆ ಬೇಕು. ರಾವಣನು ಸೀತೆಯನ್ನು ಕದ್ದೊಯ್ದಾಗ ರಾಮನು ಸೀತೆಯ ತ್ಯಾಗಮಾಡುವುದರಿಂದ ಜಗತ್ತಿನ ಕ್ಷೇಮವಾಗುತ್ತದೆಯೆ ? ರಾವಣನು ಅಧರ್ಮದಿಂದ ಸೀತಾಹರಣ ಮಾಡಿದುದರಿಂದ ಅವಕ್ಕೆ ಶಿಕ್ಷೆಯಾಗಲೆಬೇಕು. ಪತಿಪತ್ನಿಯರು ಕ್ಷೇಮದಿಂದ ಸ್ವತಂತ್ರವಾಗಿರಬೇಕೆಂಬುದು ಸಮಾಜದ ಉದ್ದೇಶ. ಈ ಉದ್ದೇಶಕ್ಕೆ ಅಪಚಾರವನ್ನೆಸಗುವವನು ಶಿಕ್ಷಾರ್ಹ. ಈ ಕಾರಣ ದಿಂದಲೆ ರಾವಣನ ವಧೆಯಾಯಿತು. ಪತಿಗೆ ಧರ್ಮವಿರುವಂತೆ ಪತ್ನಿಗೂ ಧರ್ಮವಿದೆ. ರಾವಣನ ಬಂಧನದಲ್ಲಿದ್ದರೂ ಸೀತೆ ಅವನನ್ನು ಪರಿಗ್ರಹಿಸಲಿಲ್ಲ. ತನ್ನ ಪಾತಿವ್ರತ್ಯವನ್ನೂ ಚಾರಿತ್ರ್ಯ ವನ್ನೂ ರಕ್ಷಿಸಿಕೊಂಡ ಮಹಾಸಾಧ್ವಿ ಅವಳು. ಆತ್ಮ ವಿನಾಶ ಕರವಾದ ಆಸುರೀ ಶಕ್ತಿಯನ್ನು ಎಲ್ಲ ರೀತಿಯಿಂದಲೂ ಎದುರಿಸ ಬೇಕು. ರಾವಣ ರೂಪದ ಆಸುರೀಶಕ್ತಿಯನ್ನು ರಾಮ ರೂಪದ ಆಧ್ಯಾತ್ಮಿಕ ಶಕ್ತಿಯಿಂದ ಸಂಹರಿಸುತ್ತ ಬರಬೇಕು. ರಾಮ ರಾವಣರು ಆ ಎರಡು ಶಕ್ತಿಗಳ ಪ್ರತಿನಿಧಿಗಳು. ರಾವಣನು ರಾಮನಿಗೆ ಸಮಸ್ಪರ್ಧಿಯಾಗಿ ನಿಲ್ಲುವವನಾದರೂ

ಅಂತ್ಯದಲ್ಲಿ ಹತನಾಗುವವನು. ವಾಲ್ಮೀಕಿಯ ಈ ದರ್ಶನ ದಿನ ದಿನವೂ ಕ್ಷಣಕ್ಷಣವೂ ಬದುಕನ್ನು ಎಚ್ಚರಿಸಬೇಕು.

ಮನೆಮನೆಗಳಲ್ಲಿ ಅಣ್ಣತಮ್ಮಂದಿರೆಂದರೆ ಏನಾದರೂ ಕಲಹ ವಿದ್ವೇಷ ಇರುತ್ತದೆ. ಆಸ್ತಿಯ ವಿವಾದ ಬಂದಾಗ ಅಣ್ಣ ತಮ್ಮಂದಿರು ವೈಮನಸ್ಯದಿಂದ ಒಬ್ಬರನ್ನೊಬ್ಬರು ಕೊಲೆಮಾಡಿದ ಪ್ರಸಂಗಗಳು ಅಲ್ಲಲ್ಲಿ ವರದಿಯಾಗಿವೆ. ರಾಮ ಲಕ್ಷ್ಮಣ ಭರತರ ಭ್ರಾತೃವಾತ್ಸಲ್ಯದ ಆದರ್ಶವನ್ನು ಕುರಿತು ಮನೆಮನೆಗಳಲ್ಲಿಯೂ ಮಾತನಾಡುತ್ತಾರೆ. ಆ ಆದರ್ಶದ ಎತ್ತರಕ್ಕೆ ಇನ್ನೂ ನಾವು ಏರಿಲ್ಲ. ಕುಟುಂಬ ಜೀವನದ ಸಾಮರಸ್ಯಕ್ಕೆ ಈ ಭ್ರಾತೃವಾತ್ಸಲ್ಯವೂ ಮುಖ್ಯವೆಂಬುದು ವಾಲ್ಮೀಕಿಯ ದೃಢವಾದ ನಂಬಿಕೆ. ಪಶುತ್ವದಿಂದ ಮಾನವತ್ವಕ್ಕೇರಿ ಪ್ರಗತಿಯನ್ನು ಸಾಧಿಸುವ ಮಾನವರು ಈ ಹಿರಿಯ ಆದರ್ಶವನ್ನು ಕಾರ್ಯರೂಪಕ್ಕೆ ತರಲು ಯತ್ನಿಸಬೇಕು.

ಕುಟುಂಬ ಜೀವನವನ್ನು ಚಿತ್ರಿಸಿರುವಂತೆ ಋಷ್ಯಾಶ್ರಮಗಳನ್ನೂ ಚಿತ್ರಿಸಿದ್ದಾನೆ ವಾಲ್ಮೀಕಿ. ಕುಟುಂಬ ಜೀವನದಲ್ಲಿ ಭೋಗದ ಮೂಲಕ ಧರ್ಮದ ಆಚರಣೆ ಮಾಡುತ್ತ ಮುಕ್ತಿ ಸಂಪಾದನೆ ಮಾಡುವುದಾದರೆ ಋಷ್ಯಾಶ್ರಮಗಳಲ್ಲಿ ಅಧ್ಯಯನ ತಪಸ್ಸುಗಳ ಮೂಲಕ ಮುಕ್ತಿ ಸಂಪಾದನೆ ಮಾಡುವುದು ಜೀವನದ ಧ್ಯೇಯವಾಗಿತ್ತು. ಅಯೋಧ್ಯೆಯಂತಹ ಸುಖಶಾಂತಿ ಪೂರ್ಣವಾದ ನಗರದಲ್ಲಿ ಸ್ವಾರ್ಥ ಮೊದಲಾದ ದೋಷಗಳಿಂದ ಜೀವನ ಕಲುಷಿತವಾಗಿತ್ತು. ಅರಣ್ಯದ ತಪೋವನಗಳಲ್ಲಿ ಶಾಂತಿ ಸೌಂದರ್ಯಗಳಿದ್ದರೂ ರೂಕ್ಷ ಜನರ ಕಾಟವಿತ್ತು. ಅರಣ್ಯ ಜೀವನದ ಕಷ್ಟವನ್ನು ಹೇಳುತ್ತ ಸೊಬಗಿಯ ಕಠಿತನವೂ ಮರೆಯದೆ ವರ್ಣಿಸಿದ್ದಾನೆ ವಾಲ್ಮೀಕಿ. ಪಟ್ಟಣವಲ್ಲಾಗಲಿ

ಋಷ್ಯಾಶ್ರಮದಲ್ಲಾಗಲಿ ಧರ್ಮವೇ ಜೀವನದಲ್ಲಿ ಪ್ರಧಾನವಾಗಿತ್ತು. ಆದರೆ ದಶರಥನಂತಹ ಧರ್ಮಿಷ್ಠನು ರಾಜನಾಗಿದ್ದಾಗ ಕೈಕೇಯಿ ಸ್ವಾರ್ಥಪರಳಾಗಿ ಬದುಕಿದಳು. ಅಹಲ್ಯೆ ಋಷ್ಯಾಶ್ರಮದಲ್ಲಿ ಋಷಿಪತ್ನಿಯಾಗಿ ಬದುಕಿದರೂ ಭ್ರಷ್ಟಳಾದಳು. ಪಟ್ಟಣದಲ್ಲಾಗಲಿ ಋಷ್ಯಾಶ್ರಮದಲ್ಲಾಗಲಿ ಮಾನವ ಜೀವನವನ್ನು ಪ್ರಲೋಭನಗಳು ಕಾಡುತ್ತಲೆ ಇದ್ದುವು. ಆದರೆ ಮಹಿಮಾನ್ವಿತರು ಚಿತ್ತಶುದ್ಧಿಯಿಂದ ಬದುಕಿ ಇತರರಿಗೆ ಮಾರ್ಗದರ್ಶನ ಮಾಡಿದರು. ವಸಿಷ್ಠನು ರಾಜಪುರೋಹಿತನಾಗಿ ಸಾತ್ತ್ವಿಕನಾಗಿದ್ದನು. ಭರದ್ವಾಜಾದಿ ಮಹರ್ಷಿಗಳು ಆಶ್ರಮಗಳಲ್ಲಿ ನೆಲಸಿ ಮಹಾಪುರುಷರಾಗಿದ್ದರು.

ದುಷ್ಟರು ಸದಾ ದುಷ್ಟರಾಗಿರುವುದಿಲ್ಲ. ಮಾರೀಚನು ಒಮ್ಮೆ ರಾಮನ ಅತಿಶಯ ಬಲವನ್ನು ಅರಿತಮೇಲೆ ಅರಣ್ಯದಲ್ಲಿ ತಪಸ್ವಿಯಾಗಿ ನಿಂತನು. ರಾವಣನು ಸೀತೆಯನ್ನು ಕದ್ದು ತರಲು ಮಾರೀಚನ ಸಹಾಯವನ್ನು ಕೇಳಿದಾಗ ರಾವಣನಿಗೆ ರಾಮನ ಅಸಾಧಾರಣ ಶಕ್ತಿಯನ್ನು ವಿವರಿಸಿ ಸೀತಾಪಹರಣದಿಂದ ದೂರವಿರುವಂತೆ ಬುದ್ಧಿ ಹೇಳಿದನು.

ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ |
ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ||

"ಹೇ ರಾಜನೆ. ಎಲ್ಲ ಕಾಲದಲ್ಲಿಯೂ ಪ್ರಿಯವಾದುವನ್ನು ಹೇಳುವವನು ದೊರಕುವುದು ಸುಲಭ. ಅಪ್ರಿಯವಾದರೂ ಯುಕ್ತವಾದುದನ್ನು ಹೇಳುವವರೂ ವಿರಳ, ಕೇಳುವವರೂ ವಿರಳ."

ದುಷ್ಟನಾದ ಮಾರೀಚನು ರಾಮನ ಮಹಾವ್ಯಕ್ತಿತ್ವವನ್ನು ಕಂಡು ಭೀತಿಯಿಂದಲೆ ವಿವೇಕಿಯಾದನು. ದುಷ್ಟರನ್ನು ಸನ್ಮಾರ್ಗದಲ್ಲಿ ಪ್ರವೃತ್ತರನ್ನಾಗಿ ಮಾಡಲು ರಾಮನಂತಹ ವೀರ ಪುರುಷರ ಆವಶ್ಯಕತೆ ಜಗತ್ತಿನಲ್ಲಿದೆ. ಈಗ ರಾಜನೆಂಬ ವ್ಯಕ್ತಿ ಮರೆಯಾಗಿ ಅವನ ಸ್ಥಾನದಲ್ಲಿ ಸರ್ಕಾರವಿದೆ. ಸರ್ಕಾರದಲ್ಲಿ ರಾಮರೂಪದ ಧಾರ್ಮಿಕ, ನೈತಿಕ, ಕ್ಷಾತ್ರ ಶಕ್ತಿಗಳಿರುವುದಾದರೆ ದುಷ್ಟರನ್ನು ದಾರಿಗೆ ತರುವುದು ಸುಲಭವಾಗುತ್ತದೆ. ರಾಜಕಾರಣಿಗಳು ರಾಮಾಯಣವನ್ನು ಓದಿ ಮನನ ಮಾಡಿ ರಾಮತ್ವವನ್ನು ಪಡೆಯುವ ಆವಶ್ಯಕತೆ ಹೆಚ್ಚಾಗಿದೆ.

ಸ್ತ್ರೀಯ ಸೌಂದರ್ಯ ಮನುಷ್ಯನನ್ನು ಆಕರ್ಷಿಸುತ್ತದೆ. ಈ ಆಕರ್ಷಣೆ ಸಂತತಿಯನ್ನು ಮುಂದುವರಿಸಲು ಪ್ರೇರಕವಾಗುವ ಮಹಾಶಕ್ತಿ. ಮಾನವನು ವಿಕಾಸಶೀಲನಾಗಿ ಈ ಶಕ್ತಿಯನ್ನು ಸದುಪಯೋಗಪಡಿಸಿ ಸುಖಿಸುವುದನ್ನು ಕಲಿತಿದ್ದಾನೆ. ಮಾನಸಿಕ ದೈಹಿಕ ಆರೋಗ್ಯ ದೃಷ್ಟಿಯಿಂದಲೂ ಸಾಮಾಜಿಕ ಆರೋಗ್ಯ ದೃಷ್ಟಿಯಿಂದಲೂ ಮದುವೆಯ ಸಂಪ್ರದಾಯ ಬೆಳೆದು ಬಂದಿತು. ಪರಪತ್ನಿಯನ್ನು ಮೋಹಿಸುವುದಾಗಲಿ ಸೇರುವುದಾಗಲಿ ಮಹಾಪಾಪವೆಂದೇ ಪರಿಗಣಿಸಲ್ಪಟ್ಟಿದೆ. ಸಹಸ್ರಾರು ವರ್ಷಗಳ ಅನುಭವದಿಂದ ಸಮಾಜದ ಹಿತಕ್ಕಾಗಿ ರೂಪಿಸಿದ ನಿಯಮವಿದು. ಈ ನಿಯಮವನ್ನು ಮೀರಿದರೆ ಸಮಾಜದ ಅಸ್ತಿಭಾರವು ಸಡಿಲವಾಗುತ್ತದೆ. ರಾವಣನು ರಾಮಪತ್ನಿ ಸೀತೆಯನ್ನು ಮೋಹಿಸಿದುದು ಮೊದಲನೆಯ ದೋಷ; ಆಕೆಯನ್ನು ಕದ್ದೊಯ್ದುದು ಅದಕ್ಕಿಂತ ಪಾಪಕರವಾದ ಕೃತ್ಯ. ಅವನು ತನ್ನ ಪತ್ನಿ ಮಂಡೋದರಿಯಲ್ಲಿಯೆ ಅನುರಕ್ತನಾಗಿ

ಸುಖಿನಲ್ಲಿರಬಹುದಿತ್ತು. ಆದರೆ ಅವನ ಪರಸ್ತ್ರೀ ವ್ಯಾಮೋಹ ಅವನ ಸರ್ವನಾಶಕ್ಕೆ ಕಾರಣವಾಯಿತು.

ವಾಲ್ಮೀಕಿ ಎಲ್ಲಿಯೂ ಧರ್ಮಬೋಧೆಯನ್ನು ನೇರವಾಗಿ ಮಾಡತೊಡಗುವುದಿಲ್ಲ. ಅಲ್ಲೊಮ್ಮೆ ಇಲ್ಲೊಮ್ಮೆ ಸಂದರ್ಭೋಚಿತವಾಗಿ ನಾಲ್ಕು ಮಾತುಗಳಲ್ಲಿ ಜೀವನದ ಅಶಾಶ್ವತೆಯನ್ನು ಕುರಿತು ಹೇಳುವುದುಂಟು. ಭರತನು ಏನು ಹೇಳಿದರೂ ಅಯೋಧ್ಯೆಗೆ ಹಿಂತಿರುಗದಿರುವುದನ್ನು ಕಂಡು ರಾಮನು ತಮ್ಮನನ್ನು ಸಮಾಧಾನ ಮಾಡುವಾಗ ಈ ರೀತಿ ಹೇಳಿದನು.

ಸರ್ವೇ ಕ್ಷಯಾನ್ತಾ ನಿಚಯಾಃ ಪತನಾನ್ತಾಃ ಸಮುಚ್ಛ್ರಯಾಃ ।
ಸಂಯೋಗ ವಿಪ್ರಯೋಗಾನ್ತಾ ಮರಣಾನ್ತಂ ಚ ಜೀವಿತಮ್ ॥

"ಧನ ಸಂಗ್ರಹ ಮಾಡಿದುದು ವ್ಯಯವಾಗುತ್ತದೆ. ಅಭಿವೃದ್ಧಿಯಾದುದು ಪತನವಾಗುತ್ತದೆ. ಎಲ್ಲ ಸಂಯೋಗಕ್ಕೂ ಬಿಡುಗಡೆಯೆ ಕೊನೆ. ಜೀವನಕ್ಕೆ ಮರಣವೇ ಅಂತ್ಯ."

ಯಥಾ ಫಲಾನಾಂ ಪಕ್ವಾನಾಂ ನಾನ್ಯತ್ರ ಪತನಾದ್ಭಯಮ್ ।
ಏವಂ ನರಸ್ಯ ಜಾತಸ್ಯ ನಾನ್ಯತ್ರ ಮರಣಾದ್ಭಯಮ್ ॥

"ಮಾಗಿದ ಫಲಗಳು ಬೀಳಲೆ ಬೇಕು. ಹುಟ್ಟಿದ ಮನುಷ್ಯನು ಸಾಯಲೆ ಬೇಕು."

ಯಥಾಗಾರಂ ದೃಢಸ್ಥೂಣಂ ಜೀರ್ಣಂ ಭೂತ್ವಾವಸೀದತಿ ।
ತಥಾವಸೀದನ್ತಿ ನರಾ ಜರಾಮೃತ್ಯುವಶಂ ಗತಾಃ ॥

"ಬಲವಾದ ತೊಲೆಗಳುಳ್ಳ ಮನೆಯೂ ಜೀರ್ಣವಾಗಿ ನಾಶ

ವಾಗುತ್ತದೆ. ಮನುಷ್ಯರು ಮುದುಕರಾಗಿ ಮೃತ್ಯುವಶರಾಗುತ್ತಾರೆ.”

ಅತ್ಯೇತಿ ರಜನೀ ಯಾ ತು ಸಾ ನ ಪ್ರತಿನಿವರ್ತತೇ |
ಯಾತ್ಯೇವ ಯಮುನಾ ಪೂರ್ಣಂ ಸಮುದ್ರಮುದಕಾರ್ಣವಮ್ ||

“ಕಳೆದು ಹೋದ ರಾತ್ರಿ ಮತ್ತೆ ಬರುವುದಿಲ್ಲ. ನೀರಿನಿಂದ ತುಂಬಿದ ಯಮುನಾ ನದಿ ಸಮುದ್ರವನ್ನು ಸೇರಿದ ಮೇಲೆ ಹಿಂತಿರುಗುವುದಿಲ್ಲ.”

ಅಹೋ ರಾತ್ರಾಣಿ ಗಚ್ಛನ್ತಿ ಸರ್ವೇಷಾಂ ಪ್ರಾಣಿನಾಮಿಹ |
ಆಯೂಂಷಿ ಕ್ಷಪಯನ್ತ್ಯಾಶು ಗ್ರೀಷ್ಮೇ ಜಲಮಿವಾಂಶವಃ ||

“ಗ್ರೀಷ್ಮ ಕಾಲದಲ್ಲಿ ಸೂರ್ಯನ ಪ್ರಖರಕಿರಣಗಳು ನೀರನ್ನು ಹೀರುವಂತೆ ಪ್ರಾಣಿಗಳ ಆಯುಸ್ಸು ಹಗಲು ರಾತ್ರಿಯೂ ಕಡಿಮೆಯಾಗುತ್ತ ಬರುತ್ತದೆ.”

ನನ್ದನ್ತ್ಯುದಿತ ಆದಿತ್ಯೇ ನನ್ದನ್ತ್ಯಸ್ತಮಿತೇ ರವೌ |
ಆತ್ಮನೋ ನಾವಬುಧ್ಯನ್ತೇ ಮನುಷ್ಯಾ ಜೀವಿತಕ್ಷಯಮ್

“ಬೆಳಗಾದರೆ ಮನುಷ್ಯನು ಸಂತೋಷಗೊಳ್ಳುತ್ತಾನೆ. ರಾತ್ರಿಯಾದರೆ ಸಂತೋಷಗೊಳ್ಳುತ್ತಾನೆ. ಆದರೆ ತನ್ನ ಜೀವನ ಕ್ರಮೇಣ ನಶಿಸುವುದೆಂಬುದನ್ನು ತಿಳಿಯುವುದಿಲ್ಲ.”

ವಯಸಃ ಪತಮಾನಸ್ಯ ಸ್ರೋತಸೋ ವಾನಿವರ್ತಿನಃ |
ಆತ್ಮಾ ಸುಖೇ ನಿಯೋಕ್ತವ್ಯಃ ಸುಖಭಾಜಃ ಪ್ರಜಾಃ ಸ್ಮೃತಾಃ ||

"ಹಿಂದಿರುಗದಿರುವ ಪ್ರವಾಹದಂತೆ ವಯಸ್ಸು ಕಳೆದು ಹೋಗುತ್ತದೆ. ಸುಖವನ್ನು ಇಚ್ಛಿಸುವ ಜನರು ಧರ್ಮಮಾರ್ಗ ದಿಂದ ಆತ್ಮ ಸುಖವನ್ನು ಪಡೆಯಬೇಕು."

ಕಾವ್ಯದಲ್ಲಾಗಲಿ ಜೀವನದಲ್ಲಾಗಲಿ ನೇರವಾದ ನೀತಿ ಬೋಧೆ ರುಚಿಸುವುದಿಲ್ಲ. ವಾಲ್ಮೀಕಿ ಎಲ್ಲಿಯಾದರೂ ಒಮ್ಮೊಮ್ಮೆ ಇಂತಹ ಹಿತವಚನಗಳನ್ನು ಹೇಳಿದಾಗ ತುಂಬ ರುಚಿಸುತ್ತದೆ; ಹೃದಯದ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ವಾಲ್ಮೀಕಿ ಜೀವನವನ್ನು ತಿರಸ್ಕರಿಸಿ ನಿರಾಶೆಯನ್ನುಂಟುಮಾಡುವುದಿಲ್ಲ. ಎಲ್ಲ ಕರ್ಮಗಳ ಹಿಂದೆ ನಿಸ್ಸಂಗತೆ ಇರಬೇಕೆಂಬುದು ವಾಲ್ಮೀಕಿಯ ದರ್ಶನ. ವಾಲ್ಮೀಕಿ ಪ್ರಚಂಡ ಆಶಾವಾದಿ. ಜೀವನದಲ್ಲಿ ಎಲ್ಲರೂ ಕರ್ಮದಲ್ಲಿ ನಿರತರಾಗಬೇಕೆಂಬುದು ಅವನ ಸಂದೇಶ.

> ಕರ್ಮಭೂಮಿಮಿಮಾಂ ಪ್ರಾಪ್ಯ ಕರ್ತವ್ಯಂ ಕರ್ಮಯಚ್ಛುಭಮ್
> ಅಗ್ನಿರ್ವಾಯುಶ್ಚ ಸೋಮಶ್ಚ ಕರ್ಮಣಾಂ ಫಲಭಾಗಿನಃ ||

"ಈ ಕರ್ಮಭೂಮಿಯನ್ನು ಸೇರಿದ ಮೇಲೆ ಯಾವುದು ಶುಭಕರ್ಮವೊ ಆ ಕರ್ಮವನ್ನು ಮಾಡಬೇಕು. ಅಗ್ನಿ ವಾಯು ಚಂದ್ರರೂ ಕರ್ಮಗಳಿಗೆ ತಕ್ಕ ಫಲವನ್ನು ಹೊಂದಿದ್ದಾರೆ."

ವಾಲ್ಮೀಕಿಯ ದೃಷ್ಟಿಯಲ್ಲಿ ಎಲ್ಲ ವೃತ್ತಿಗಳಿಗೂ ಗೌರವವಿದೆ. ಹನುಮಂತನು ರಾಮನ ಭೃತ್ಯನಾಗಿ ಶ್ರದ್ಧೆಯಿಂದಲೂ ದೃಢ ವಿಶ್ವಾಸದಿಂದಲೂ ಸಲ್ಲಿಸಿದ ಸೇವಾ ಆದರ್ಶವನ್ನು ಮುಗಿಲು ಮುಟ್ಟುವಂತೆ ಚಿತ್ರಿಸಿ, ಸೇವಾವೃತ್ತಿಯ ಘನತೆ ಗೌರವಗಳನ್ನು ಎಂದಿಗೂ ಮರೆಯದಂತೆ ಚಿತ್ರಿಸಿದ್ದಾನೆ. ಆಂಜನೇಯನ ಶಕ್ತಿಯೆಂದರೆ ಸ್ವಾಮಿನಿಷ್ಠೆ, ಶ್ರದ್ಧೆ, ವಿಶ್ವಾಸ, ಶೀಲ. ಈ

ಶಕ್ತಿಯ ನೆರವು ಕಾರ್ಮಿಕ, ಅಧ್ಯಾಪಕ, ಮುಮುಕ್ಷು ಮೊದ ಲಾದ ಸಮಾಜದ ಪ್ರತಿಯೊಬ್ಬರಿಗೂ ಆವಶ್ಯಕ. ಈ ಶಕ್ತಿ ಯನ್ನು ಪಡೆಯುವುದರಿಂದಲೆ ಜಗತ್ತಿನ ಕ್ಷೇಮ ಸಾಧ್ಯ. ಶ್ರೇಷ್ಠ ಭೃತ್ಯನು ಶ್ರೇಷ್ಠ ಸ್ವಾಮಿಗೆ ಸಮನಾಗುತ್ತಾನೆ. ಸಾಗರವನ್ನು ದಾಟಿ ಸೀತೆಯ ವೃತ್ತಾಂತವನ್ನು ತಂದ ಹನುಮಂತನನ್ನು ರಾಮನು ಆಲಂಗಿಸಿ ಗೌರವಿಸಿದನು. ಈ ದೃಷ್ಟಾಂತ ಹಿರಿಯ ಸಂಸ್ಕೃತಿಯನ್ನು ತೋರುವ ಉತ್ತಮ ನಿದರ್ಶನ.

ಸುಮಂತ್ರನು ಸೂತನಾದರೂ ದಶರಥಮಹಾರಾಜನಿಗೂ ಹಿತೋಪದೇಶ ಮಾಡಿದನು. ಯಾವ ವೃತ್ತಿಯ ಜನರನ್ನೂ ವಾಲ್ಮೀಕಿ ಹೀನವಾಗಿ ಕಂಡಿಲ್ಲ. ಶಬರಿಯ ಆತಿಥ್ಯವನ್ನು ರಾಮನು ಸ್ವೀಕರಿಸಿದನು. ಇಲ್ಲಿ ಶುದ್ಧ ಹೃದಯದ ಶ್ರೇಷ್ಠತೆಯನ್ನು ವಾಲ್ಮೀಕಿ ಶ್ಲಾಘಿಸಿರುವುದನ್ನು ಕಾಣುತ್ತೇವೆ. ಸ್ವಾರ್ಥಮೂಲವಾದ ದುರಭಿಸಂಧಿಯಿಂದ ಒಬ್ಬರನ್ನೊಬ್ಬರು ತುಳಿಯುವ ಮನೋಭಾವನೆ ದೇಶದೇಶಗಳಲ್ಲಿ ವರ್ಗವರ್ಗಗ ಳಲ್ಲಿ ವಿರಸಕ್ಕೆ ಕಾರಣವಾಗಿದೆ. ವಾಲ್ಮೀಕಿ ಸಾರಿದ ಸಮತ್ವ ದೃಷ್ಟಿಯನ್ನು ಅರಿತು ಜಗತ್ತು ನಿರಂತರವೂ ಜಾಗ್ರತವಾಗ ಬೇಕು.

ಪ್ರೇಮದ ಪುರಸ್ಕಾರದಿಂದ ಲಭಿಸುವುದು ಪ್ರೇಮ. ಸತ್ಕ ರ್ಮದ ಪುರಸ್ಕಾರದಿಂದ ಲಭಿಸುವುದು ಆತ್ಮತೃಪ್ತಿ. ಸಮಾಜ ವನ್ನು ಪರಿಷ್ಕರಿಸುವ ಪ್ರಧಾನ ಸಾಧನವೆಂದರೆ ತ್ಯಾಗ. ಅಯೋಧ್ಯೆಯ ರಾಜಕುಟುಂಬದ ಜೀವನ ಕಥೆಯಲ್ಲಿ ಸರ್ವ ವ್ಯಾಪಿಯಾದ ಲೋಕತತ್ತ್ವವನ್ನು ಚಿತ್ರಿಸಿ ತನ್ನ ಮಹಾಕಾವ್ಯ ವನ್ನು ವಾಲ್ಮೀಕಿ ವಿಶ್ವತ್ವಕ್ಕೇರಿಸಿ ಕೃತಕೃತ್ಯನಾಗಿದ್ದಾನೆ. ದಶ ರಥನಂತಹ ತಂದೆ, ರಾಮನಂತಹ ಮಗ, ಸೀತೆಯಂತಹ

ಪತ್ನಿ, ರಾಮ ಲಕ್ಷ್ಮಣ ಭರತರಂತಹ ಸಹೋದರರು, ಅಂಜನೇಯನಂತಹ ಕರ್ತವ್ಯಪಾರಾಯಣ—ಇಂಥವರನ್ನು ಎಲ್ಲಿ ಕಾಣುವುದು? ರಾಮಾಯಣದ ಪಾತ್ರಗಳು ಮರ್ತ್ಯರಾದರೂ ಅಮರ್ತ್ಯರಂತೆ ಶೋಭಿಸುತ್ತಾರೆ. ಆದುದರಿಂದಲೇ ರಾಮರಾಜ್ಯವೆಂಬುದು ಮಹಾತ್ಮಗಾಂಧಿಯವರಿಗೆ ಆದರ್ಶರಾಜ್ಯವಾಯಿತು. ಅಂತಹ ಮಂಗಲರಾಜ್ಯದ ಉದಯಕ್ಕೆ ರಾಮತ್ವವು ಭಾರತೀಯರ ಹಾಗೂ ಲೋಕದ ಸಕಲ ಮಾನವ ಹೃದಯದಲ್ಲಿಯೂ ಅವತರಿಸಬೇಕು. ಪ್ರತಿಯೊಬ್ಬನ ಹೃದಯದಲ್ಲಿಯೂ ರಾಮಪಟ್ಟಾಭಿಷೇಕವಾಗುವ ಸುದಿನಗಳು ಬೇಗನೆ ಬರಲೆಂದು ಹಾರೈಸೋಣ.

ವಾಲ್ಮೀಕಿ ಗಿರಿಸಂಭೂತಾ ರಾಮಸಾಗರ ಗಾಮಿನೀ |
ಪುನಾತು ಭುವನಂ ಪುಣ್ಯಾ ರಾಮಾಯಣ ಮಹಾನದೀ ||

"ವಾಲ್ಮೀಕಿ ಗಿರಿಯಲ್ಲಿ ಹುಟ್ಟಿ ರಾಮಸಾಗರವನ್ನು ಕುರಿತು ಹರಿಯುವ ಪುಣ್ಯಪ್ರದ ರಾಮಾಯಣ ಮಹಾನದಿಯು ಭುವನವನ್ನು ಪವಿತ್ರವನ್ನಾಗಿ ಮಾಡಲಿ!"

ಉಪಸಂಹಾರ

ವಿಸ್ತಾರವೂ ಭವ್ಯವೂ ಭಾರತದ ಮಹಾಕೃತಿಯೂ ಆದ ವಾಲ್ಮೀಕಿ ರಾಮಾಯಣವನ್ನು ಕುರಿತು ಒಂದು ಪುಟ್ಟ ಪುಸ್ತಕ ದಲ್ಲಿ ಪರಿಚಯ ಮಾಡಿಕೊಡುವುದೆಂದರೆ ಸಮುದ್ರವನ್ನು ಬಟ್ಟಲಿನಲ್ಲಿ ತುಂಬಿಟ್ಟಂತೆ! ಶ್ರೀ ರಾಮನ ಪಾತ್ರವನ್ನು ನಿರೂ ಪಿಸ ಬೇಕಾದರೂ ಒಂದು ದೊಡ್ಡ ಪುಸ್ತಕದ ವಿಸ್ತಾರವೆ ಬೇಕಾಗುತ್ತದೆ. ರಾಮಾಯಣದಲ್ಲಿ ಚಿತ್ರಿಸಲ್ಪಟ್ಟಿರುವ ಸಮಾಜ ಜೀವನ, ವಿದ್ಯಾಭ್ಯಾಸ ಕ್ರಮ, ಸಂಸ್ಕೃತಿ, ತತ್ತ್ವನಿರೂಪಣೆ, ಕಾವ್ಯ ಸೌಂದರ್ಯ–ಇತ್ಯಾದಿ ವಿಚಾರಗಳನ್ನು ಕುರಿತು ನಾಲ್ಕು ಮಾತುಗಳನ್ನು ಬರೆಯಲು ಈ ಪುಸ್ತಕದಲ್ಲಿ ಸಾಧ್ಯವಾಗಲಿಲ್ಲ. ಮುಂದೆ ವಾಲ್ಮೀಕಿ ರಾಮಾಯಣವನ್ನು ಕುರಿತು ವಿಸ್ತಾರವಾಗಿ ಬರೆಯುವ ಆಕಾಂಕ್ಷೆ ಇದೆ.

ಸಂಸ್ಕೃತದಲ್ಲಿ ರಾಮಾಯಣವನ್ನು ಕುರಿತ ನಾಟಕಗಳು ಕಾವ್ಯಗಳು ಇತ್ಯಾದಿ ಅನೇಕ ಕೃತಿಗಳಿವೆ. ಭಾರತದ ಎಲ್ಲ ಮುಖ್ಯ ದೇಶ ಭಾಷೆಗಳಲ್ಲಿಯೂ ರಾಮಾಯಣವು ಭಾಷಾಂತರ ವಾಗಿದೆ. ಇದಲ್ಲದೆ ರಾಮಾಯಣ ಕಥಾ ವಸ್ತುವನ್ನು ಅಳ ವಡಿಸಿಕೊಂಡು ನೂತನ ದರ್ಶನದಿಂದ ಮೂಡಿದ ಕೃತಿಗಳೂ ಇವೆ. ಭಾರತದಲ್ಲಿ ಪ್ರಸಿದ್ಧವಾದಂತೆ ಟಿಬೆಟ್, ಪೂರ್ವ ತುರ್ಕೀಸ್ಥಾನ, ಬಾಲಿ ದ್ವೀಪ, ಜಾವ ಮೊದಲಾದ ದೇಶಗಳ ಲ್ಲಿಯೂ ರಾಮಾಯಣವು ಭಾಷಾಂತರವಾಗಿಯೊ ರೂಪಾಂತರ ವಾಗಿಯೊ ಪ್ರಸಿದ್ಧಿ ಪಡೆದಿದೆ. ರಾಮಾಯಣವು ಇಷ್ಟು ಜನಪ್ರಿಯ ವಾಗಲು ಅಲ್ಲಿ ಮೂಡಿರುವ ಉದಾತ್ತ ಪಾತ್ರಗಳೆ ಕಾರಣ. ಈ

ಮಹಾಕಾವ್ಯವನ್ನು ಸೃಜಿಸಿದ ವಾಲ್ಮೀಕಿ ಮಹರ್ಷಿಯ ಪ್ರತಿಭೆಯೂ ಉದಾತ್ತವಾದುದು.

ವಾಲ್ಮೀಕಿ ರಾಮಾಯಣದ ಸಂಸ್ಕೃತ ಶೈಲಿ ಸರಳ, ಸುಂದರ ಮತ್ತು ಮಧುರ. ಈ ಕಾವ್ಯವನ್ನು ನಾಲ್ಕೈದುಸಾರಿ ಅರ್ಥ ಸಹಿತವಾಗಿ ಓದಿದರೆ ಸಂಸ್ಕೃತ ಭಾಷೆಯ ಜ್ಞಾನ ಬಹುಮಟ್ಟಿಗೆ ಬಂದಂತೆಯೆ ಸರಿ. ಇಂತಹ ಮಹಾಕೃತಿ ನಮ್ಮ ದೇಶದಲ್ಲಿ ಮೂಡಿರುವುದು ನಮ್ಮ ಪುಣ್ಯ. ಶ್ರೀ ಅರವಿಂದ ಮಹರ್ಷಿಗಳು ರಾಮಾಯಣವನ್ನು ಕುರಿತು "ಎಲ್ಲರೂ ರಾಮಾಯಣದ ದರ್ಶನವನ್ನು ಅರಿಯಲಾರರೆಂದು ಕಾಣುತ್ತದೆ. ಹಾಗೇನಾದರೂ ಸಾಧ್ಯವಾದರೆ, ಜಗತ್ತಿನ ಯಾವ ಕೃತಿಯೂ ರಾಮಾಯಣಕ್ಕೆ ಸದೃಶವಾಗದೆಂಬುದನ್ನು ತಿಳಿಯುತ್ತಾರೆ" ಎಂದು ಹೇಳಿದರು. ಈ ಮಾತಿನ ಸತ್ಯ ರಾಮಾಯಣವನ್ನು ಅಭ್ಯಾಸ ಮಾಡುವವರಿಗೆ ತಿಳಿಯುತ್ತದೆ. ಈ ಪುಣ್ಯ ಕೃತಿಯ ನಿರ್ಮಲ ರಸಕೋಶಕ್ಕೆ ಪ್ರವೇಶಿಸಿ ಯಾರು ಬೇಕಾದರೂ ಶಾಂತಿ ತುಷ್ಟಿ ಪುಷ್ಟಿಗಳನ್ನು ಪಡೆಯಬಹುದು.

ರಾಮಾಯ ರಾಮಭದ್ರಾಯ ರಾಮಚಂದ್ರಾಯ ಧಸೇ |
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ||

"ರಾಮನಿಗೆ, ರಾಮಭದ್ರನಿಗೆ, ರಾಮಚಂದ್ರನಿಗೆ, ಸೃಷ್ಟಿ ಕರ್ತನಿಗೆ, ರಘುನಾಥನಿಗೆ, ನಾಥನಿಗೆ, ಸೀತಾಪತಿ ಗೆ ನಮಸ್ಕಾರ.

ಓಂ ಶಾಂತಿಃ ಶಾಂತಿಃ ಶಾಂತಿಃ